ಸಂಪುಟ 01 | ಸಂಚಿಕೆ 103 | ಶನಿವಾರ 28 ಫೆಬ್ರವರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ವಿಜ್ಞಾನ ದಿನ**

ಭಾರತದಲ್ಲಿ ಪ್ರತಿ ವರ್ಷ ಫೆಬ್ರವರಿ 28 ರಂದು ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. ಭಾರತೀಯ ಭೌತಶಾಸ್ತ್ರಜ್ಞ ಸರ್ ಸಿ.ವಿ. ರಾಮನ್ ಅವರು ಫೆಬ್ರವರಿ 28, 1928 ರಂದು ರಾಮನ್ ಪರಿಣಾಮವನ್ನು ಕಂಡುಹಿಡಿದ ದಿನದ ನೆನಪಿಗಾಗಿ ಇದನ್ನು ಆಚರಿಸಲಾಗುತ್ತದೆ. ಈ ಸಾಧನೆಯನ್ನು ಗೌರವಿಸಲು ಮತ್ತು ವೈಜ್ಞಾನಿಕ ಜಾಗೃತಿಯನ್ನು ಉತ್ತೇಜಿಸಲು, ಭಾರತ ಸರ್ಕಾರವು ಫೆಬ್ರವರಿ 28 ಅನ್ನು 1986 ರಲ್ಲಿ ರಾಷ್ಟ್ರೀಯ ವಿಜ್ಞಾನ ದಿನವೆಂದು ಘೋಷಿಸಿತು. ಈ ದಿನವು ವಿಜ್ಞಾನದ ಮಹತ್ವವನ್ನು ಎತ್ತಿ ತೋರಿಸುತ್ತದೆ ಮತ್ತು ವಿದ್ಯಾರ್ಥಿಗಳು ಮತ್ತು ನಾಗರಿಕರಲ್ಲಿ ವೈಜ್ಞಾನಿಕ ಚಿಂತನೆಯನ್ನು ಪ್ರೋತ್ಸಾಹಿಸುತ್ತದೆ.

**2) ಅಪರೂಪದ ಕಾಯಿಲೆಗಳ ದಿನ**

ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವ 300 ಮಿಲಿಯನ್‌ಗಿಂತಲೂ ಹೆಚ್ಚು ಜನರಿಗೆ ಜಾಗೃತಿ ಮೂಡಿಸಲು, ಭಾರತದಲ್ಲಿ ಮತ್ತು ಜಾಗತಿಕವಾಗಿ ಪ್ರತಿ ವರ್ಷ ಫೆಬ್ರವರಿ ಕೊನೆಯ ದಿನದಂದು (ಫೆಬ್ರವರಿ 28, 2026) ಅಪರೂಪದ ಕಾಯಿಲೆಗಳ ದಿನವನ್ನು ಆಚರಿಸಲಾಗುತ್ತದೆ, ಇದರಲ್ಲಿ 72% ರಷ್ಟು ಆನುವಂಶಿಕವಾಗಿದೆ. ಭಾರತದಲ್ಲಿನ ಕಾರ್ಯಕ್ರಮಗಳು ರೋಗಿಗಳನ್ನು ಸುಧಾರಿಸುವುದು, ರೋಗನಿರ್ಣಯ ಮಾಡುವುದು ಮತ್ತು ಚಿಕಿತ್ಸೆಗೆ ಪ್ರವೇಶವನ್ನು ಒದಗಿಸುವುದರ ಮೇಲೆ ಕೇಂದ್ರೀಕರಿಸುತ್ತವೆ.

## ಸುಭಾಷಿತ

ಯಾವ ಕೆಲಸವನ್ನೇ ಆಗಲಿ ಉತ್ಸಾಹದಿಂದ ಮಾಡಬಲ್ಲವನು ಗುರಿ ಮುಟ್ಟದೆ ಇರಲಾರ.

ರವಿ ಕಿರಣ

# ಬಾಗಲಕೋಟೆ,ದಾವಣಗೆರೆ ದಕ್ಷಿಣ ಉಪಚುನಾವಣೆ :ಸುರ್ಜೇವಾಲಾ ಜೊತೆ ಸಿದ್ದು–ಡಿಕೆಶಿ ಮಹತ್ವದ ಚರ್ಚೆ 'ಕೈ' ಟಿಕೆಟ್ ಯಾರಿಗೆ?

**ಬೆಂಗಳೂರು: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಚುನಾವಣಾ ಆಯೋಗ ಸಿದ್ಧತೆ ಆರಂಭಿಸಿದ್ದು, ಈ ನಡುವೆ ಕೈ ಪಾಳಯದಲ್ಲಿ ಟಿಕೆಟ್‌ಗಾಗಿ ಪೈಪೋಟಿ ಆರಂಭವಾಗಿದೆ.**

ಮಾಜಿ ಸಚಿವ ಎಚ್.ವೈ ಮೇಟಿ ಅವರ ನಿಧನದಿಂದ ತೆರವಾದ ಬಾಗಲಕೋಟೆ ವಿಧಾನಸಭಾ ಕ್ಷೇತ್ರ, ಮಾಜಿ ಸಚಿವ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಿಧನನಿಂದ ತೆರವಾದ ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪ ಚುನಾವಣೆ ಇನ್ನೂ ದಿನಾಂಕ ಘೋಷಣೆಯಾಗಿಲ್ಲ. ಆದಾಗ್ಯೂ, ಕಾಂಗ್ರೆಸ್‌ನಲ್ಲಿ ಟಿಕೆಟ್‌ಗಾಗಿ ತೀವ್ರ ಪೈಪೋಟಿ ಆರಂಭಗೊಂಡಿದೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ಮಹತ್ವದ ಚರ್ಚೆ ನಡೆಸಿದ್ದಾರೆಂದು ಮೂಲಗಳಿಂದ ತಿಳಿದುಬಂದಿದೆ.

ಮನ್ರೇಗಾ ಯೋಜನೆ ರದ್ದುಗೊಳಿಸಿದ್ದನ್ನು ವಿರೋಧಿಸಿ ಕಾಂಗ್ರೆಸ್



ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಲು ಚಿಕ್ಕಬಳ್ಳಾಪುರಕ್ಕೆ ತೆರಳುವ ಮೊದಲು ಜಕ್ಕೂರು ವಿಮಾನ ನಿಲ್ದಾಣದಲ್ಲಿ ಸಿದ್ದರಾಮಯ್ಯ, ಶಿವಕುಮಾರ್ ಮತ್ತು ಸುರ್ಜೇವಾಲಾ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆಂದು ತಿಳಿದುಬೂಂದಿದೆ. 45 ನಿಮಿಷಗಳ ಅನೌಪಚಾರಿಕ ಮಾತುಕತೆಯಲ್ಲಿ, ಟಿಕೆಟ್‌ಗಾಗಿ ಪಕ್ಷದಲ್ಲಿ ತೀವ್ರ ಪೈಪೋಟಿ ನಡೆಯುತ್ತಿರುವ ಬಗ್ಗೆ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದಾವಣಗೆರೆ ದಕ್ಷಿಣಕ್ಕೆ, ಶಾಮನೂರು ಶಿವಶಂಕರಪ್ಪ ಅವರ ಪುತ್ರ ಮತ್ತು ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಮ್ಮ ಪುತ್ರ ಸಮರ್ಥ್ ಅವರನ್ನು ಕಣಕ್ಕಿಳಿಸುವಂತೆ ಪಕ್ಷವನ್ನು ಒತ್ತಾಯಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇದಲ್ಲದೆ ಶಾಮನೂರು ಅವರ ಕಿರಿಯ ಪುತ್ರ ಎಸ್.ಎಸ್. ಗಣೇಶ್ ಅವರ ಹೆಸರೂ ಕೂಡ ಕೇಳಿಬಂದಿದೆ. ಈ ನಡುವೆ ಮಲ್ಲಿಕಾರ್ಜುನ್ ಅವರು ಸಂಪುಟದ ಸಚಿವರಾಗಿದ್ದು, ಅವರ ಪತ್ನಿ ಡಾ. ಪ್ರಭಾ ಮಲ್ಲಿಕಾರ್ಜುನ್ ಸಂಸದೆಯಾಗಿರುವುದ-ರಿಂದ, ಶಾಮನೂರು ಕುಟುಂಬದ ಸದಸ್ಯರನ್ನು ಕಣಕ್ಕಿಳಿಸುವ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಚಿಂತನೆ ನಡೆಸುತ್ತಿದೆ ಎಂದು ತಿಳಿದುಬಂದಿದೆ. ಈ ಸುದ್ದಿ ತಿಳಿದ ಮಲ್ಲಿಕಾರ್ಜುನ್ ಅವರು, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಸಹ ಸಿದ್ಧರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದ 80,000 ಮತದಾರರಿದ್ದು, ಈ ಸಮುದಾಯ ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದೆ. ಶಾಮನೂರು ಸಮುದಾಯದ ಅಭ್ಯರ್ಥಿಗೆ ಸ್ಥಾನ ಬಿಟ್ಟುಕೊಡುವುದಾಗಿ ಭರವಸೆ ನೀಡಿದ್ದರು ಹೇಳಿದ್ದಾರೆ, ವಸತಿ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರ ಬೆಂಬಲದೊಂದಿಗೆ ಎಂ-ಎಲ್‌ಸಿ ಕೆ. ಅಬ್ದುಲ್ ಜಬ್ಬಾರ್ ಟಿಕೆಟ್ ಗಾಗಿ ಲಾಬಿ ನಡೆಯುತ್ತಿದ್ದಾರೆ.

ಈ ನಡುವೆ "ಕಾಂಗ್ರೆಸ್ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ, ಹಿಂದೂ ಮತ್ತು ಮುಸ್ಲಿಂ ಮತದಾರರು ಧ್ರುವೀಕರಣಗೊಂಡರೆ ಬಿಜೆಪಿಗೆ ಮೇಲುಗೈ ಸಿಗಬಹುದು" ಎಂದು ರಾಜ-ಕೀಯ ವಿಶ್ಲೇಷಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

3ನೇ ಪುಟಕ್ಕೆ

# ಸಮಾಜ ಸೇವಕ ಹಜೇರಿಗೆ ಗೌರವ ಸಮರ್ಪಣೆ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ವಿ.ಕೆ.ಹೆಚ್.ಆಂಗ್ಲ ಮಾಧ್ಯಮ ಶಿಕ್ಷಣ ಸಂಸ್ಥೆಯ ಅಧ್ಯಕ್ಷ,ಸಮಾಜ ಸೇವಕ ಪ್ರಹ್ಲಾದ ಹಜೇರಿ ಇವರನ್ನು ನಾವದಗಿ ಗ್ರಾಮ ಬ್ರಹನ್ಮಠದ ಕಾರ್ಯಕ್ರಮದಲ್ಲಿ ಗೌರವ ಸಮರ್ಪಣೆ ಸಲ್ಲಿಸಲಾಯಿತು.**

ನಾವದಗಿ ಗ್ರಾಮದ ಬ್ರಹನ್ಮಠದಲ್ಲಿ ಪೂಜ್ಯ ಷ.ಬ್ರ.ಶ್ರೀ ರಾಜ ಗುರು ರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳವರ ದ್ವಿತೀಯ ವರ್ಷದ ವಾರ್ಷಿಕೋತ್ಸವ ಅಂಗವಾಗಿ ನಡೆಯುತ್ತಿರುವ ಗುಡ್ಡಾಪುರದ ಶ್ರೀ ದಾನಮ್ಮ ದೇವಿಯ ಪುರಾಣ ಕಾರ್ಯಕ್ರಮದಲ್ಲಿ ದಾಸೋಹ ಸೇವೆ ಗೈದ ಇವರನ್ನು ಪರಮಪೂಜ್ಯರು ಸನ್ಮಾನಿಸಿ ಗೌರವಿಸಿದರು.ಈ ಸಂದರ್ಭದಲ್ಲಿ ಪೂಜ್ಯರು ಮಾತನಾಡಿ 20 ದಿನಗಳ ಈ ಒಂದು ವಿಶೇಷ ಕಾರ್ಯಕ್ರಮಕ್ಕೆ ಬಹಳಷ್ಟು ಮಹನೀಯರು ದಾಸೋಹ ಹಾಗೂ ಇತರ ಕಾರ್ಯಗಳಲ್ಲಿ ತಮ್ಮ ತನು ಮನ ಧನದ ಸಹಕಾರವನ್ನು ನೀಡಿದ್ದಾರೆ.

ಇವತ್ತು ತಾಳಿಕೋಟಿಯ ಸಮಾಜ ಸೇವಕ ಶಿಕ್ಷಣ ಪ್ರೇಮಿಗಳಾದ ಹಜೇರಿಯವರು ಪ್ರಸಾದ ಸೇವೆಯನ್ನು ಮಾಡಿದ್ದಾರೆ ಅವರಿಗೆ ನಾನು ಆಶೀರ್ವಾದ ರೂಪದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದರು. ಕಾರ್ಯಕ್ರಮದಲ್ಲಿ ಶಹಾಪೂರ ತಾಲೂಕಿನ ಹೋತಪೇಟೆ ಕೈಲಾಸ ಆಶ್ರಮದ ಪೂಜ್ಯ ಶಿವಲಿಂಗ ಶರಣರು, ಗುರಯ್ಯ ಶಾಸ್ತ್ರಿಗಳು, ಸಾಹಿತಿ ಬಸವರಾಜ ಗೊರಜಿ,ಪುರಾಣಿಕ ರಾಚಯ್ಯ ಹಿರೇಮಠ,ವಿಠಲಸಿಂಗ್ ಹಜೇರಿ, ಗ್ರಾಮದ ಗಣ್ಯರು ಹಿರಿಯರು ಹಾಗೂ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಇದ್ದರು.

## ಅಮೋಘಸಿದ್ದೇಶ್ವರ ದೇವಸ್ಥಾನ ಅಭಿವೃದ್ಧಿಗೆ ಕಾಣಿಕೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಲ್ಲೂಕಿನ ಸುಕ್ಷೇತ್ರ ಚಬನೂರ ಗ್ರಾಮದ ಅಮೋಘಸಿದ್ದೇಶ್ವರ ದೇವಸ್ಥಾನದ ಅಭಿವೃದ್ಧಿಗೆ ಗ್ರಾಮದ ಶಶಿಕಾಂತ ಹಿರೇಮಠ ಅವರ ಪ್ರಯತ್ನದಿಂದ ಬಿಕೆಜಿ ಮೈನಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿ ವತಿಯಿಂದ ರೂ 2.00 ಲಕ್ಷ ಹಾಗೂ ಜೆ ಎಸ್ ಡಬ್ಲ್ಯು ಸ್ಟೀಲ್ ಲಿಮಿಟೆಡ್ ಕಂಪನಿ ವತಿಯಿಂದ ರೂ 9.80ಲಕ್ಷ ರೂಪಾಯಿಗಳ ಕಾಣಿಕೆಯ ಚೆಕ್ ನ್ನು ಶುಕ್ರವಾರ ಈರಾತಯ್ಯಸ್ವಾಮಿ ಹಿರೇಮಠ ಅವರು ಹಸ್ತಾಂತರಿಸಿದರು.**




ಈ ಸಮಯದಲ್ಲಿ ದೇವಸ್ಥಾನದ ಅರ್ಚಕ ಸಿದ್ರಾಮಪ್ಪಮುತ್ಯಾ ಒಡೆಯರ, ಪ್ರಕಾಶ ಮುತ್ಯಾ ಒಡೆಯರ, ಸಮಿತಿ ಅಧ್ಯಕ್ಷ ಬಸನಗೌಡ ಬಿ ಪಾಟೀಲ, ಕಾರ್ಯದರ್ಶಿ ಮಶ್ಯಾಕ ವಾಲೀಕಾರ ಸದಸ್ಯ ರಾಮನಗೌಡ ನಾರಾಪಾಟೀಲ ಇದ್ದರು.

# ನೀರಿನ ಸೌಕರ್ಯ ಒದಗಿಸುವಂತೆ ಶಾಸಕರಿಗೆ ಮನವಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಸೆಕ್ರೇಡ್ ಹಾರ್ಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮತ್ತು ವಿಪಿಎಂ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ನೀರಿನ ಸಮಸ್ಯೆ ಇದ್ದು ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ.**

ಆದಷ್ಟು ಬೇಗ ನೀರು ಒದಗಿಸಲು ಕ್ರಮ ವಹಿಸುವಂತೆ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರ ನಿಯೋಗ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ,ಶಾಸಕ ಸಿ.ಎಸ್. ನಾಡಗೌಡ(ಅಪ್ಪಾಜಿ) ಇವರಿಗೆ ಮನವಿ ಸಲ್ಲಿಸಿದರು. ಗುರುವಾರ ಮುದ್ದೆಬಿಹಾಳ ಪಟ್ಟಣದ ಶಾಸಕರ ಕಾರ್ಯಾಲಯದಲ್ಲಿ ನಿಯೋಗದ ಸದಸ್ಯರು ಭೇಟಿ ಮಾಡಿ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಅಪ್ಪಾಜಿ



ನಾಡಗೌಡರು ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಹೆಚ್ಚು ಆಸಕ್ತಿ ವಹಿಸಬೇಕು ಇದರಲ್ಲಿ ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳಬೇಕು.

ಈ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುತ್ತೇನೆ ಎಂದು ತಿಳಿಸಿದರು. ಮನವಿಗೆ ಸ್ಪಂದಿಸಿದ ಶಾಸಕರಿಗೆ ಶಾಲೆಯ ಆಡಳಿತ ಮಂಡಳಿ ನಿಯೋಗದ ಪರವಾಗಿ ಸಂಸ್ಥೆಯ ಮುಖ್ಯಸ್ಥರಾದ ಫಾದರ್ ಸುನೀಲ ಅಂ-ದ್ರಾದೆ ಧನ್ಯವಾದಗಳು ತಿಳಿಸಿದರು. ಈ ಸಮಯದಲ್ಲಿ ಸಿಸ್ಟರ್ ಐರಿನ್ ತವರು,ಸಿಸ್ಟರ್ ಸ್ಟೆಲ್ಲಾ, ಪ್ರಸಾದ ಗಟ್ಟಿ ಇದ್ದರು.

# ತ್ರಿಚಕ್ರ ವಾಹನವನ್ನು ವಿತರಣೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕಾರ್ಮಿಕ ಇಲಾಖೆಯ ವತಿಯಿಂದ ವಿವಿಧ ಕಂಪನಿಗಳು, ಕೈಗಾರಿಕೆಗಳು ಹಾಗೂ ಇತರೇ ವಾಣಿಜ್ಯ ಸಂಸ್ಥೆಗಳ ಪ್ರಾಯೋಜಕತ್ವದ ಮತ್ತು ಸಹಯೊಗದೊಂದಿಗೆ ಕಾರ್ಮಿಕ ಸಚಿವರು ಸಂತೋಷ ಲಾಡ್ ಅವರು ಫೆ.27ರಂದು ರಾಜ್ಯದಾದ್ಯಂತ ಅರ್ಹ ವಿಕಲಚೇತನ-ರಿಗೆ ಮೋಟಾರ್ ಸಹಿತ ತ್ರಿಚಕ್ರ ವಾಹನಗಳನ್ನು ವಿತರಿಸಲು ಕಾರ್ಯಕ್ರಮದ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ಜಿಲ್ಲಾಡಳಿತ,**

ಕಾರ್ಮಿಕ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ರಾಯಚೂರು, ಪ್ರಾದೇಶಿಕ ಸಾರಿಗೆ ಅಧಿಕಾ-ರಿಗಳು ರಾಯಚೂರು ಇವರ ವತಿಯಿಂದ



ಕು॥ಮಾರೆಮ್ಮ ತಂದೆ ಮಾರೆಪ್ಪ ಇವರಿಗೆ ತ್ರಿಚಕ್ರ ವಾಹನವನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾ-ರಿಗಳಾದ ಶಿವಾನಂದ, ಕಾರ್ಮಿಕ ಇಲಾಖೆಯ ಜಿಲ್ಲಾ ಅಧಿಕಾರಿ ಆರತಿ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶ್ರೀದೇವಿ, ರಾಯಚೂರಿನ 1 ಹಾಗೂ 2ನೇ ಕಾರ್ಮಿಕ ನಿರೀಕ್ಷಕರಾದ ಕುಮಾರಿ ಪ್ರಿಯಾಂಕ, ಮೆ॥ ಪವರ್‌ಮೆಕ್ ಪ್ರಾಜೆಕ್ಟ್ ಲಿಮಿಟೆಡಿನ ಹೆಚ್. ಆರ್. ಮನೋಜ ಸೇರಿದಂತೆ ಕಾರ್ಮಿಕ ಇಲಾಖೆಯ ಸಿಬ್ಬಂದಿಗಳು ಇದ್ದರು.

# ಮಾಡಸಿರವಾರ ಮದ್ಯ ಮುಕ್ತ ಗ್ರಾಮಕ್ಕಾಗಿ ಕೆ.ಆರ್.ಎಸ್ ಪಕ್ಷ ನೇತೃತ್ವದಲ್ಲಿ ಮಹಿಳೆಯರು ಆಗ್ರಹ!

ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಮಾಡಸಿರವಾರ ಗ್ರಾಮದಲ್ಲಿ ಪುರುಷರು ಹಾಗೂ ಯುವಕರು ಆದಿಯಾಗಿ ಮದ್ಯ ವ್ಯಸನಕ್ಕೆ ದಾಸರಾಗುತ್ತಿದ್ದಾರೆ, ನಾವು ಮಹಿಳೆಯರು ದುಡಿದು ತಂದ ಹಣವನ್ನು ಗಂಡಸರ ಕುಡಿತಕ್ಕೆ ದುರ್ಬಳಕೆ ಆಗುತ್ತಿದೆ, ಇದರಿಂದ ಸಾಕಷ್ಟು ಬಡ ಕುಟುಂಬಗಳು ನಲಿಗೆ ಹೋಗಿವೆ.**

ಈ ಕೂಡಲೇ ಮದ್ಯಪಾನ ಮುಕ್ತ ಗ್ರಾಮವನ್ನಾಗಿ ಮಾಡಿ ಎಂದು ಅನೇಕ ಮಹಿಳೆಯರು ಸ್ವಯಂ ಪ್ರೇರಿತರಾಗಿ ಕೆ.ಆರ್.ಎಸ್ ಪಕ್ಷದ ರಾಜ್ಯ ಕಾರ್ಯದರ್ಶಿ ನಿರುಪಾದಿ ಕೆ.ಗೋಮರ್ಸಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ,



ಸಿಂಧನೂರು ತಹಶೀಲ್ದಾರ್ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು. ಫೆ.27 ಶುಕ್ರವಾರದಂದು ನಗರದ ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿ "ಬೀರು ಬೇಡ ನೀರು ಕೊಡಿ, ಸಾರಾಯಿ ಅಂಗಡಿ ಬೇಡ ಶಿಕ್ಷಣ ಬೇಕು ಯುವಕರನ್ನು ಉಳಿಸಿ ಸಾರಾಯಿ ನಿಷೇಧಿಸಿ" ಎಂಬ ಹಲವಾರು ಘೋಷಣೆಗಳನ್ನು ಕೂಗುವ ಮೂಲಕ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವ ಕಿರಾಣಿ ಅಂಗಡಿ, ಹೋಟೆಲ್, ಸಣ್ಣ ಕಪಾಟು ಅಂಗಡಿಗಳು ಸೇರಿದಂತೆ ಪ್ರತಿಯೊಂದು ಕಡೆ ದಾಳಿ ನಡೆಸಿ ಅಕ್ರಮ ಮದ್ಯ ಮಾರಾಟ ತಡೆದು ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಬೇಕು.

ಮದ್ಯ ವ್ಯಸನಿಗಳಿಂದ ಮನೆಯಲ್ಲಿನ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬಿರುತ್ತದೆ. ಜೊತೆಗೆ ಕುಟುಂಬದ ಸದಸ್ಯರು ಬೀದಿಗೆ ಬಿಳುತ್ತಾರೆ, ಮಾಡಶಿರವಾರ ಗ್ರಾಮದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ಪರಿಗಣನೆಗೆ ತೆಗೆದುಕೊಂಡು ದಾಳಿ ನಡೆಸಿ, ಮದ್ಯ ಮುಕ್ತ ಗ್ರಾಮ ಮಾಡುವಂತೆ ಅಬಕಾರಿ ಇಲಾಖೆ ಅಧಿಕಾ-ರಿಗಳಿಗೆ ಸೂಚನೆ ಕೊಡಿ ಎಂದು ಆಗ್ರಹಿಸಿದರು. ಇದೇ ವೇಳೆ: ಕರ್ನಾಟಕ ರಾಜ್ಯರೈತ ಸಂಘ ಹಾಗೂ ಹಸಿರು ಸೇನೆ ಮುಖಂಡ ಬಸವರಾಜ ಗೋಡಿಹಾಳ ಸೇರಿದಂತೆ ಮಾಡಸಿರವಾರ ಗ್ರಾಮದ ಮಹಿಳೆಯರು ಪ್ರತಿಭಟನೆಯಲ್ಲಿ ಭಾಗವಹಿಸಿ ಬೆಂಬಲ ನೀಡಿದರು.

## ಸಾಹಿತ್ಯ ಸಿಂಚನ

ವಿಜ್ಞಾನದ ಬೆಳಕು

ಅಜ್ಞಾನ ಅಂಧಕಾರದ ಮಧ್ಯೆ
ಬೆಳಗಿದ ದೀಪವೇ ವಿಜ್ಞಾನ,
ಮಾನವನ ಚಿಂತನೆಗೆ ಕೊಟ್ಟ
ಅಮೂಲ್ಯವಾದ ದಾನ.

ಆಕಾಶದ ನಕ್ಷತ್ರಗಳನ್ನು ಎಣಿಸಿ,
ಚಂದ್ರನ ಮೆಟ್ಟಿಲೇರಿದ ಸಾಧನೆ,
ಭೂಮಿಯ ರಹಸ್ಯ ತಿಳಿಯಲು
ಹುಡುಕಿದ ಅನೇಕ ಕಾರಣ.

ಹನಿ ಹನಿಯಿಂದ ಸಾಗರವಾದಂತೆ
ಪ್ರಶ್ನೆಗಳಿಂದ ಹುಟ್ಟಿತು ಜ್ಞಾನ,
ಪ್ರಯೋಗಗಳ ಪಥದಲ್ಲಿ ನಡೆಯುತ
ಬೆಳೆದಿತು ಮಾನವ ಮಾನ.

ರೋಗಗಳ ಕಾಟ ತಗ್ಗಿಸಿ
ಔಷಧಿಯ ರೂಪದಲ್ಲಿ ಬಂದಿತು,
ದೂರದ ಲೋಕವನ್ನೂ ಕ್ಷಣದಲ್ಲೇ
ಹತ್ತಿರಕ್ಕೆ ತಂದು ನಿಂತಿತು.

ವಿದ್ಯುತ್ ಬೆಳಕಿನ ಕಿರಣವಾಗಿ
ಜಗವನ್ನೆಲ್ಲಾ ಹೊಳೆಯಿಸಿತು,
ಕಂಪ್ಯೂಟರ್ ಲೋಕದ ಮೂಲಕ
ಜ್ಞಾನ ದ್ವಾರ ತೆರೆದಿತು.

ವಿಜ್ಞಾನವೆಂದರೆ ಕೇವಲ ಪಾಠವಲ್ಲ,
ಜೀವನದ ದಿಕ್ಕು ತೋರಿಸುವ ದೀಪ,
ಸತ್ಯದ ಹುಡುಕಾಟದ ಹಾದಿಯಲ್ಲಿ
ಮಾನವನಿಗೆ ಅದು ಅನಂತ ರೂಪ.
ಪ್ರಶ್ನಿಸು, ತಿಳಿದುಕೋ, ಪರಿಶೀಲಿಸು ?
ಇದೇ ವಿಜ್ಞಾನದ ಮಂತ್ರ,
ಜ್ಞಾನದಿಂದ ಜಗ ತೇಲಲಿ
ಇದು ನಮ್ಮ ಎಲ್ಲರ ಕನಸು ಅಂತರ

**ರಮೇಶ**

## ಕೊತ್ತದೊಡ್ಡಿ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಪ್ರವೇಶಕ್ಕೆ ಅರ್ಜಿ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಯ ಕೊತ್ತದೊಡ್ಡಿ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ 2026-27ನೇ ಸಾಲಿನಲ್ಲಿ ಏಳನೇ ಹಾಗೂ ಒಂಬತ್ತನೇ ತರಗತಿಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಅವಧಿಯನ್ನು ಮಾರ್ಚ್ 3ರವರೆಗೆ ವಿಸ್ತರಣೆ ಮಾಡಲಾಗಿದೆ.**

ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಕೇಂದ್ರೀಯ ಪಠ್ಯಕ್ರಮವನ್ನು (ಸಿಬಿಎಸ್‌ಇ) ಹೊಂದಿದೆ. ವಿವಿಧ ವರ್ಗಗಳ 6-8ನೇ ತರಗತಿಯಲ್ಲಿ ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಪ್ರವೇಶಾತಿಯು ರಾಷ್ಟ್ರೀಯ ಬುಡಕಟ್ಟು ವಿದ್ಯಾರ್ಥಿಗಳ ಶೈಕ್ಷಣಿಕ ಸಂಘ, ನವ ದೆಹಲಿ ಅವರು ರೂಪಿಸಿರುವ ನಿಯಮಗಳಿಗೆ ಬದ್ಧವಾಗಿದ್ದು, ಪ್ರವೇಶಾತಿ ಪರೀಕ್ಷೆಯ ಮೂಲಕ ಸಂಪೂರ್ಣ ಪಾರದರ್ಶಕವಾಗಿ ಪ್ರವೇಶಾತಿಯನ್ನು ಕಲ್ಪಿಸಲಾಗುತ್ತಿದ್ದು, ಆಸಕ್ತ ಪೋಷಕರು ಮತ್ತು ವಿದ್ಯಾರ್ಥಿಗಳು ಇದರ ಸದುಪಯೋಗಪಡಿಸಿಕೊಳ್ಳಬಹುದಾಗಿದೆ. ಆಸಕ್ತರು ಆಫ್‌ಲೈನ್ ಮೂಲಕ ಅರ್ಜಿಯನ್ನು ಮಾರ್ಚ್ 03ರ ಸಂಜೆ 05ಗಂಟೆಯೊಳಗಾಗಿ ಕೊತ್ತದೊಡ್ಡಿ ಏಕಲವ್ಯ ಮಾದರಿ ವಸತಿ ಶಾಲೆಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರವೇಶಾತಿ ಸಮಿತಿ ಸಂಚಾಲಕರಾದ ರವಿಕುಮಾರ್ ಜಿ., 7090104974, ಮಹಾದೇವ್ ಜಾಧವ್ 9901528675ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಕೊತ್ತದೊಡ್ಡಿ ಏಕಲವ್ಯ ಮಾದರಿ ವಸತಿ ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಾಲಹಳ್ಳಿಯಲ್ಲಿ ರೈತರ ಪರದಾಟ- ಸರ್ವರ್ ಸಮಸ್ಯೆಯಿಂದ FID-EKYC ಸ್ಥಗಿತ, ಬಿಸಿಲಿನಲ್ಲಿ ರೈತರ ಆಕ್ರೋಶ

❑ ನೈಜ್ಯ ದೆಸೆ ನ್ಯೂಸ್







**ಜಾಲಹಳ್ಳಿ: ಫೆ 27ಗ್ರಾಮದಲ್ಲಿರುವ ರೈತ ಸಂಪರ್ಕ ಕೇಂದ್ರದಲ್ಲಿ ಈಚಿಚಿಅ-ಇಏಙಅ ಕಾರ್ಯಕ್ಕೆ ಭಾರಿ ಪ್ರಮಾಣದಲ್ಲಿ ರೈತರು ಜಮಾಯಿಸಿದರು. ಆದರೆ ಸರ್ವರ್ ಸಮಸ್ಯೆ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ ಹಿನ್ನೆಲೆಯಲ್ಲಿ ರೈತರು ಬಿಸಿಲಿನಲ್ಲಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಯಿತು.**

ಕೇಂದ್ರ ಸರ್ಕಾರದ ಯೋಜನೆಗಳಿಗೆ ಅಗತ್ಯವಿರುವ ಈಚಿಚಿಅ-ಇಏಙಅ ಜೋಡಣೆ ಕಾರ್ಯಕ್ಕಾಗಿ ರೈತರು ಬೆಳಿಗ್ಗೆಯಿಂದಲೇ ಸಾಲಿನಲ್ಲಿ ನಿಂತಿದ್ದರು. ನಾಳೆ 28-02-2026 ಕೊನೆಯ ದಿನಾಂಕವಾಗಿರುವುದರಿಂದ ಆತಂಕ ಹೆಚ್ಚಾಗಿದೆ. ತಾಲೂಕು ಕೃಷಿ ಅಧಿಕಾರಿಯಾದ ಶ್ರೀನಿವಾಸ್ ಅವರನ್ನು ಸಂಪರ್ಕಿಸಿದಾಗ "ಎಲ್ಲಾ ಕಡೆ ಇದೇ ಸಮಸ್ಯೆ ಇದೆ ಸರ್, ಸಾಯಂಕಾಲ ಅಥವಾ ರಾತ್ರಿ ಮಾಡಿಕೊಳ್ಳಿ" ಎಂದು ಉತ್ತರ ನೀಡಲಾಗಿದೆ ಎನ್ನಲಾಗಿದೆ. ಆದರೆ ಸಾಯಂಕಾಲ ಅಥವಾ ರಾತ್ರಿ ವೇಳೆ ಅಧಿಕಾರಿಗಳು ಲಭ್ಯರಾಗುತ್ತಾರೆಯೇ ಎಂಬುದು ರೈತರ ಪ್ರಶ್ನೆಯಾಗಿದೆ.

ರೈತ ಮುಖಂಡ ಮುದರಂಗಪ್ಪ ವತಾರ ಮಾತನಾಡಿ, ಸರ್ವರ್ ಸಮಸ್ಯೆಯಿಂದ ರೈತರಿಗೆ ತೊಂದರೆ ಉಂಟಾಗಿರುವುದರಿಂದ ದಿನಾಂಕವನ್ನು ಮುಂದೂಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು. ರೈತರಾದ ಭೀಮಣ್ಣ ಗುಮ್ಮಿದಾರ್ ಅವರು ತಾಲೂಕು ಕೃಷಿ ಅಧಿಕಾರಿಗಳ ನಡೆ ನಿರ್ಲಕ್ಷ್ಯತೆಯನ್ನು ತೋರಿಸುತ್ತದೆ ಎಂದು ಆರೋಪಿಸಿದರು. ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ರಂಗಣ್ಣ ಕೋಲ್ಕಾರ್ ಮಾತನಾಡಿ, ಸರ್ಕಾರ ರೈತರಿಗಾಗಿ ಸಾಕಷ್ಟು ಯೋಜನೆಗಳನ್ನು ರೂಪಿಸಿದರೂ, ಅವು ಸರಿಯಾಗಿ ಜಾರಿಯಾಗಲು ಅಧಿಕಾರಿಗಳ ಸ್ಪಂದನೆ ಅಗತ್ಯವಿದೆ ಎಂದು ಹೇಳಿದರು.

FID-EKYC ಪ್ರಕ್ರಿಯೆ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ಸಹಾಯಕವಾಗಿರುವುದರಿಂದ, ಕೊನೆಯ ದಿನಾಂಕವನ್ನು ಕನಿಷ್ಠ ಒಂದು ತಿಂಗಳವರೆಗೆ ವಿಸ್ತರಿಸಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಪ್ರಗತಿಪರ ರೈತರಾದ ಅಮರೇಗೌಡ ಕಮಲದಿನ್ನಿ, ಭೀಮಣ್ಣ ಗುಮ್ಮಿದಾರ್, ಮುದರಂಗಪ್ಪ ವತಾರ, ಸಂಜೀವಪ್ಪ ಹೊಸೂರು, ಲಿಂಗಣ್ಣ ನಾಯಕ ಮಕಾಸಿ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳ ರೈತರು ಹಾಜರಿದ್ದರು. ಸ್ಥಳ: ಜಾಲಹಳ್ಳಿ ದಿನಾಂಕ: 27-02-2026 ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ಛಲವಾದಿ ಮಹಾಸಭಾದಿಂದ ಒಳಮೀಸಲಾತಿ ರಹಿತ ಹಳೆಯ ಮೀಸಲಾತಿ ಪದ್ದತಿ ಮರುಜಾರಿಗೆ ಆಗ್ರಹ!



❑ ನೈಜ್ಯ ದೆಸೆ ನ್ಯೂಸ್

**ಒಳ ಮೀಸಲಾತಿ ರಹಿತ ಹಳೆಯ ಮೀಸಲಾತಿ ಪದ್ದತಿಯನ್ನು ಮರು ಜಾರಿಗೆ ತಂದು ನೇಮಕಾತಿ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ತೊಂದರೆಯಾಗದಂತೆ ಸೂಕ್ತ ಆದೇಶ ಹೊರಡಿಸಬೇಕು, ಒಳ ಮೀಸಲಾತಿ ಜಾರಿಗೆ ತಂದ ನಂತರ ಅನೇಕ ಆಡಳಿತಾತ್ಮಕ ಕಾನೂನು ಮತ್ತು ಸಾಮಾಜಿಕ ಗೊಂದಲಗಳು ಉಂಟಾಗಿವೆ ಎಂದು ಛಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷ ರಾಮಣ್ಣ ಗೋನವಾರ ಆರೋಪ ಮಾಡಿದರು.**

ನಗರದ ತಹಶೀಲ್ದಾರ್ ಕಚೇರಿಯಲ್ಲಿ ಛಲವಾದಿ ಮಹಾಸಭಾದಿಂದ ಪ್ರತಿಭಟನೆ ಹಮ್ಮಿಕೊಂಡು ಮಾತನಾಡಿದ ಅವರು, ಸರ್ಕಾರ ತರಾತುರಿಯಲ್ಲಿ ಒಳಮೀಸಲಾತಿ ಜಾರಿಗೆ ಮಾಡಿ ಕೆಳಸಮುದಾಯಕ್ಕೆ ಅನ್ಯಾಯ ಮಾಡುತ್ತಿದೆ. ನಾಗಮೋಹನ್ ದಾಸರ ವರದಿ ಕೆಳ ಸಮುದಾಯಕ್ಕೆ ಮರಣಶಾಸನವಾಗಿದೆ. ಕೆಪಿಎಸ್.ಸಿ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಶೇ.17 ರಷ್ಟು ಮೀಸಲಾತಿ ಕುರಿತು ತೀರ್ಪು ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಹಿನ್ನೆಲೆ ನೇಮಕಾತಿ ಪ್ರಕ್ರಿಯೆಗೆ ವಿಳಂಬವಾಗಿ ಸಾವಿರಾರು ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಬಲಗೈಗೆ ಸಂಬಂಧಿಸಿದ ಜಾತಿಗಳಲ್ಲಿ 63 ಒಳಜಾತಿಗಳು ಬರುತ್ತಿದ್ದು, ಒಳಮೀಸಲಾತಿ ಜಾರಿಯಿಂದ ಶೋಷಿತ ವರ್ಗಕ್ಕೆ ಅನ್ಯಾಯವಾಗುತ್ತಿದೆ. ಆಡಳಿತಾತ್ಮಕವಾಗಿ ತೊಂದರೆ ಉಂಟಾಗುತ್ತಿದೆ. ಒಳಮೀಸಲಾತಿ ಕುರಿತು ಉಂಟಾದ ಗೊಂದಲದ ಸಮಸ್ಯೆಗಳು, ಹಾಗೂ ನ್ಯಾಯಾಲಯದ ಅಡೆತಡೆಗಳು ನಿವಾರಣೆ ಆಗುವವರೆಗೆ ಒಳಮೀಸಲಾತಿ ರಹಿತ ಹಳೆಯ ಮೀಸಲಾತಿ ಪದ್ಧತಿಯನ್ನು ಮರುಜಾರಿಗೆ ತಂದು ನೇಮಕಾತಿ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಸೂಕ್ತ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು. ಈ ಪ್ರತಿಭಟನೆಯಲ್ಲಿ ಛಲವಾದಿ ಮಹಾಸಭಾದ ಹನುಮಂತಪ್ಪ ಗೋಮರ್ಸಿ, ನರಸಪ್ಪ ಕಟ್ಟಿಮನಿ, ವೀರೇಶ ಹಂಚಿನಾಳ, ದುರುಗಪ್ಪ ಮಲ್ಲಾಪುರ, ಹನುಮಂತಪ್ಪ ವಕೀಲ ಬೂದಿವಾಳ, ಅಯ್ಯಪ್ಪ ವಕೀಲ ಮಲ್ಲಾಪುರ, ವಿರುಪಣ್ಣ ಬೂದಿವಾಳ, ರಾಜು ಉದ್ದಾಳ, ದೊಡ್ಡಬಸವ, ನಿರುಪಾದಿ ಸಾಸಲಮರಿ, ಶಿವಪುತ್ರ ಪಗಡದಿನ್ನಿ, ಶ್ಯಾಮಣ್ಣ, ಸಿದ್ದಪ್ಪ, ಬಾಲರಾಜ ವಿರುಪಾಪುರ, ಮುದುಕಪ್ಪ, ಶರಣಪ್ಪ ಸೋಮನಾಳ, ಹುಸೇನಪ್ಪ, ವೀರೇಶ ಹೊಸಳ್ಳಿ, ಸೇರಿದಂತೆ ನೂರಾರು ಜನರು ಇದ್ದರು.

## ಮಸ್ಕಿ ಪಿಎಸ್‌ಐ ರಂಗಯ್ಯ ನೇತೃತ್ವದಲ್ಲಿ ಹೋಳಿ, ರಂಜಾನ್ ಹಬ್ಬದ ಶಾಂತಿ ಸಭೆ

### ಹಬ್ಬಗಳು ಸಹೋದರತ್ವ ಭಾವನೆಗಳನ್ನು ಇಟ್ಟುಕೊಂಡು ಶಾಂತಿ ಸೌಹಾರ್ದತೆಯಿಂದ ಆಚರಿಸಬೇಕು-ಪಿಎಸ್‌ಐ ರಂಗಯ್ಯ

❑ ನೈಜ್ಯ ದೆಸೆ ನ್ಯೂಸ್




**ಮಸ್ಕಿ: ಯಾವುದೇ ಹಬ್ಬಗಳಿರಲಿ ಹಿಂದೂ-ಮುಸ್ಲಿಂರು ಭಾವೈಕತೆಯಿಂದ ಆಚರಿಸಿದಾಗ ಮಾತ್ರ ಹಬ್ಬಗಳು ಯಶಸ್ವಿಯಾಗುತ್ತವೆ ಎಂದು ಪಿಎಸ್‌ಐ ರಂಗಯ್ಯ ಹೇಳಿದರು. ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಹೋಳಿ ಹಾಗೂ ರಂಜಾನ್ ಹಬ್ಬದ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲಾ ಸಮುದಾಯಗಳ ಹಬ್ಬಗಳನ್ನು ಪ್ರತಿಯೊಬ್ಬರು ಸಹೋದರತ್ವ ಭಾವನೆಗಳ**

ಸಾರ್ವಜನಿಕ ಸ್ಥಳಗಳಲ್ಲಿ ಕಾನೂನು ಮೀರಿ ವರ್ತಿಸಿದರೆ ಯಾವುದೇ ಮುಲಾಜಿಲ್ಲದೆ ಕಾನೂನಿನ ಕ್ರಮ ಜರುಗಿಸಲಾಗುವುದು. ಪ್ರತಿಯೊಬ್ಬರು ಸಹ ಹಿರಿಯರ ಮಾರ್ಗದ ದರ್ಶನದಂತೆ ನಡೆದುಕೊಳ್ಳಬೇಕು. ಈ ಹಿಂದಿನಿಂದಲೂ ಹಿರಿಯರು ಪಟ್ಟಣದಲ್ಲಿ ಸೌಹಾರ್ದತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಈ ಸೌಹಾರ್ದತೆಯನ್ನು ಮುಂದಿನ ಯುವಪೀಳಿಗೆಯೂ ಸಹ ಉಳಿಸಿಕೊಂಡು, ಬೆಳೆಸಿಕೊಂಡು ಹೋಗಬೇಕೆಂದರು.

ಪ್ರತಿಯೊಂದು ಹಬ್ಬಗಳನ್ನು ಶಾಂತಿ ಹಾಗೂ ಸೌಹಾರ್ದತೆಯಿಂದ ಆಚರಿಸಿ ಅದಕ್ಕೆ ಬೇಕಾದ ಪೊಲೀಸ್ ಬಂದೋಬಸ್ತನ್ನು ಇಲಾಖೆ ವತಿಯಿಂದ ಕೈಗೊಳ್ಳಲಾಗುವುದು ಒಂದು ವೇಳೆ ಕಾನೂನು ಮೀರಿ ಯಾರಾದರೂ ನಡೆದುಕೊಂಡರೆ ಅಂತವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು. ಈ ಸಂದರ್ಭದಲ್ಲಿ ಪಟ್ಟಣದ ಮುಖಂಡರು, ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಪೊಲೀಸ್ ಇಲಾಖೆ ಸಿಬ್ಬಂದಿಗಳಿದ್ದರು. ಮಸ್ಕಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಹೋಳಿ ಮತ್ತು ರಂಜಾನ್ ಹಬ್ಬದ ಅಂಗವಾಗಿ ಶಾಂತಿ ಸಭೆ ನಡೆಯಿತು.

# ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಎನ್ ಎಸ್ ಎಸ್ ಶಿಭಿರಾರ್ಥಿಗಳು ಪಾತ್ರ ಮಹತ್ತರವಾದದ್ದು: ತಹಸಿಲ್ದಾರ್ ಅರುಣಕುಮಾರ ದೇಸಾಯಿ

❑ ನೈಜ್ಯ ದೆಸೆ ನ್ಯೂಸ್



**ಸಿಂಧನೂರು: ತಾಲೂಕಿನ ಅಂಬಾಮಠದಲ್ಲಿ ನಡೆದ ನೊಬಲ್ ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಧ್ವಜಾರೋಹಣ ಮಾತನಾಡಿದ ಅವರು ಶ್ರಮವಿಲ್ಲದ ಎಲ್ಲವೂ ಸಿಗಬೇಕು ಎನ್ನುವಂತಹ ಕಾಲದಲ್ಲಿ ನಾವಿದ್ದೀವಿ. ಆದರೆ ಅದಕ್ಕೆ ಸಿಗುವಂತಹ ಫಲ ಕ್ಷಣಿಕವಾದದ್ದು, ಅದರಿಂದ ಈ ಸಮಾಜಕ್ಕೆ ನಾವು ಏನು ಕೊಡುಗೆಯನ್ನು ನೀಡಬೇಕು ಎನ್ನುವುದು ಮುಖ್ಯವಾಗಿದೆ. ಒಬ್ಬ ವ್ಯಕ್ತಿ ಪರಿಪೂರ್ಣ ಆಗಬೇಕಾದರೆ ಆ ವ್ಯಕ್ತಿಯಲ್ಲಿ ನೈತಿಕತೆಯು ಇರಬೇಕು .ಅದು ಎನ್ ಎಸ್ ಎಸ್ ನಿಂದ ಮಾತ್ರ ಸಾಧ್ಯವಾಗುತ್ತದೆ .ಎಲ್ಲರೂ ಶ್ರದ್ದೆಯಿಂದ ಇದರಲ್ಲಿ ತೊಡಗಿಕೊಂಡು ನಿಮ್ಮ ಜವಾಬ್ದಾರಿಗಳನ್ನು ತಿಳಿದುಕೊಳ್ಳಿ ಎಂದು ಹೇಳಿದರು.**

ಕಾರ್ಯಕ್ರಮದ ಉದ್ಘಾಟಕಟನಾ ಸಮಾರಂಭದಲ್ಲಿ ಧ್ವಜಾರೋಹಣ ಮಾಡಿ ಮಾತನಾಡಿದ ಸಿಂಧನೂರಿನ ತಾಶಿಲ್ದಾರ್ ಆಗಿರುವ ಅರುಣಕುಮಾರ್ ಎಚ್ ದೇಸಾಯಿ ಅವರು ಮಾತನಾಡುತ್ತಾ, ಓ ನನ್ನ ಚೇತನ ಹಾಗೂ ನೀ ಅನಿಕೇತನ ಕುವೆಂಪು ಅವರ ಕವಿತೆಯನ್ನು ನೆನೆಯುತ್ತಾ ನೂರು ಮತದ ಹೊಟ್ಟ ತೋರಿ ಅಂದರೆ ಜಾತಿ ಮತ ಪಂಥ ಭೇದಗಳಿಲ್ಲದೆ ಎಲ್ಲರೂ ಒಂದೇ ಎಂದು ಹೇಳುತ್ತಾ ಸ್ವಾರ್ಥ ರಹಿತ ಸೇವೆ ಎನ್ ಎಸ್ ಎಸ್ ಎಂದು ತಿಳಿಸಿದರು. ವಿದ್ಯಾರ್ಥಿಗಳು ಬರೀ ಶೈಕ್ಷಣಿಕವಾಗಿ ಮಾತ್ರವಲ್ಲ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡು, ಉನ್ನತ ಸ್ಥಾನವನ್ನು ಪಡೆಯಬೇಕು ನೀವು ಸಹ ಜಿಲ್ಲಾಧಿಕಾರಿಯಾಗಿ ನೇಮಕವಾಗಬೇಕು ಎಂದು ಹೇಳುತ್ತಾ, ಇಂದಿನ ವಿದ್ಯಾರ್ಥಿಗಳು ಮಾದಕ ವಸ್ತುಗಳಿಗೆ ವ್ಯಸನಿಗಳಾಗುತ್ತಿದ್ದಾರೆ.

ನಿಮ್ಮ ತಂದೆ ತಾಯಿಯರ ಬೆವರ ಹನಿಯನ್ನು ಅರ್ಥ ಮಾಡಿಕೊಳ್ಳಿ ಹೆತ್ತವರ ಕನಸನ್ನು ನನಸು ಮಾಡಿ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಸಸಿಗೆ ನೀರೆರೆದು ಉದ್ಘಾಟನೆ ಮಾಡಿ ಮಾತನಾಡಿದ ಜಿಲ್ಲಾ ಪಂಚಾಯತ ರಾಯಚೂರು ,ಸದಸ್ಯರಾದ ಶ್ರೀ ಬಸವರಾಜ ಹಿರೇಗೌಡರು,ಶ್ರಮ ಯೇವ ಜಯತೆ ಎನ್ನುವ ಮಾತು ಅರ್ಥಪೂರ್ಣವಾಗಿರುವಂಥದ್ದು ,ಶ್ರಮಕ್ಕೆ ತಕ್ಕ ಫಲ ಸಿಕ್ಕೆ ಸಿಗುತ್ತದೆ. ಆದರೆ ಕೆಲಸವನ್ನು ನಿಸ್ವಾರ್ಥ ಸೇವೆ ಮಾಡಬೇಕೆಂದುರ ಇದೆ ವೇಳೆ ಆರ್ ಸಿ ಪಾಟೀಲ್ ಅಧ್ಯಕ್ಷರು ಪಾಟಿಲ್ ಶಿಕ್ಷಣ ಸಂಸ್ಥೆ ಸಿಂಧನೂರು ಇವರು ಕಾರ್ಯಕ್ರಮದ ಕುರಿತು ನಾನು ಸಹ ಎನ್ ಎಸ್ ಎಸ್ ಶಿಬಿರದಲ್ಲಿ ಪಾಲ್ಗೊಂಡ ನಂತರ ವೇದಿಕೆಯ ಮೇಲೆ ನಿಂತುಕೊಳ್ಳಲು ಸಾಧ್ಯವಾದದ್ದು ಧೈರ್ಯವನ್ನು ಕಳಿಸಿದ್ದು, ಎನ್‌ಎಸ್‌ಎಸ್ ಎಂದು ತಮ್ಮ ಅನುಭವಗಳ ನೆನಪುಗಳನ್ನು ಮೆಲಕು ಹಾಕುತ್ತಾ ಏನನ್ನು ಬಯಸದೆ ನಿಸ್ವಾರ್ಥವಾಗಿ ಮಾಡುವ ಸೇವೆಯೇ ಎನ್‌ಎಸ್‌ಎಸ್. ಇದು ಎಲ್ಲವನ್ನು ಕಲಿಸುತ್ತ ಜೀವನದಲ್ಲಿ ಅನುಭವವನ್ನು ಉಂಟುಮಾಡುತ್ತದೆ.

ನಾನು ಇವಾಗ ಎಲ್ಲಿಗೆ ಹೋದರು ಹೊಂದಿಕೊಂಡು ಹೋಗುತ್ತಿದ್ದೇನೆ ಎಂದರೆ ಅದಕ್ಕೆ ಕಾರಣ ಈ ಎನ್ ಎಸ್ ಎಸ್ ಆಗಿದೆ ಯಾಕಂದರೆ ಶಿಬಿರದಲ್ಲಿ ಏನು ಇಲ್ಲದೆ ಇದ್ದರೂ ಬದುಕುವಂತಹ ಪಾಠವನ್ನು ಕಲಿತಿದ್ದೇವೆ. ನನ್ನಲ್ಲಿರುವ ನಾನು ಎನ್ನುವ ಅಹಂ ಅನ್ನು ತೆಗೆದು ಹಾಕುತ್ತದೆ ನಾನು ಅಲ್ಲ ನಾವು ಎನ್ನುವಂತಹ ತತ್ವವನ್ನು ಬೋಧಿಸುತ್ತದೆ .ಜೀವನದಲ್ಲಿ ಎಷ್ಟೇ ಕಷ್ಟ ಬರಲಿ ಅದನ್ನು ಎದುರಿಸುವಂತಹ ಧೈರ್ಯವನ್ನು ತುಂಬಿಸುತ್ತದೆ. ನಾವು ಒಂದಾಗಿ ಬಾಳೋಣ ಎನ್ನುವಂತಹ ಸಹಕಾರ ಸೌಹಾರ್ದಿಂದ ಕೂಡಿರುವ ಗುಣವನ್ನು ಬೆಳೆಸುತ್ತದೆ .ನಮ್ಮ ಮಾತುಗಳು ಹೇಗೆ ಇರಬೇಕೆಂಬುದು ಊಟವನ್ನು ವ್ಯರ್ಥ ಮಾಡಬಾರದು. ಯಾಕೆಂದರೆ ಎಷ್ಟೋ ಜನರಿಗೆ ತಿನ್ನಲು ಆಹಾರವೇ ಇರುವುದಿಲ್ಲ ಆದ ಕಾರಣ ಈ ಎನ್ ಎಸ್ ಎಸ್ ಈ ರೀತಿಯ ಒಳ್ಳೆಯ ನೈತಿಕ ಹಾಗೂ ನಾಯಕತ್ವದ ಗುಣವನ್ನು ಕಲಿಸುತ್ತದೆ.

ಕಾಯಕವೇ ಕೈಲಾಸ ಎನ್ನುವಂತಹ ತತ್ವವನ್ನು ಬೋಧಿಸುತ್ತದೆ ಎಂದು ಹೇಳುತ್ತಾ, ಜೀವನದಲ್ಲಿ ಏನು ಆಗಬೇಕು? ಈಗಲೆಂದಲೇ ದೊಡ್ಡ ದೊಡ್ಡ ಗುರಿಯನ್ನು ಇಟ್ಟುಕೊಳ್ಳಿ ನನಸಾಗಿಸಿಕೊಳ್ಳಿ ಎಂದು ಶಿಬಿರಾರ್ಥಿಗಳಿಗೆ ತಿಳಿಸಿದರು. ಸಿಂಧನೂರಿನ ತಾಶಿಲ್ದಾರ್ ಆಗಿರುವ ಶ್ರೀ ಅರುಣ್ ಕುಮಾರ್ ಎಚ್ ದೇಸಾಯಿ ಅವರು ಮಾತನಾಡುತ್ತಾ ಓ ನನ್ನ ಚೇತನ ಹಾಗೂ ನೀ ಅನಿಕೇತನ ಕುವೆಂಪು ಅವರ ಕವಿತೆಯನ್ನು ನೆನೆಯುತ್ತಾ ನೂರು ಮತದ ಹೊಟ್ಟ ತೋರಿ ಅಂದರೆ ಜಾತಿ ಮತ ಪಂಥ ಭೇದಗಳಿಲ್ಲದೆ ಎಲ್ಲರೂ ಒಂದೇ ಎಂದು ಹೇಳುತ್ತಾ ಸ್ವಾರ್ಥ ರಹಿತ ಸೇವೆ ಎನ್ ಎಸ್ ಎಸ್ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಬರೀ ಶೈಕ್ಷಣಿಕವಾಗಿ ಮಾತ್ರವಲ್ಲ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡು, ಉನ್ನತ ಸ್ಥಾನವನ್ನು ಪಡೆಯಬೇಕು ನೀವು ಸಹ ಜಿಲ್ಲಾಧಿಕಾರಿಯಾಗಿ ನೇಮಕವಾಗಬೇಕು ಎಂದು ಹೇಳುತ್ತಾ, ಇಂದಿನ ವಿದ್ಯಾರ್ಥಿಗಳು ಮಾದಕ ವಸ್ತುಗಳಿಗೆ ವ್ಯಸನಿಗಳಾಗುತ್ತಿದ್ದಾರೆ .ನಿಮ್ಮ ತಂದೆ ತಾಯಿಯರ ಬೆವರ ಹನಿಯನ್ನು ಅರ್ಥ ಮಾಡಿಕೊಳ್ಳಿ ಹೆತ್ತವರ ಕನಸನ್ನು ನನಸು ಮಾಡಿ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕೆ ರಾಘವೇಂದ್ರ ಶ್ರೀ ಗಂಗೋತ್ರಿ ಟ್ರಸ್ಟ್ ಸೋಮಲಾಪುರ ಇವರು ಮಾತನಾಡಿ, ಎನ್‌ಎಸ್‌ಎಸ್ ನ ಮೂಲ ಮಂತ್ರ ನನಗಾಗಿ ಅಲ್ಲ ನಮಗಾಗಿ ಎನ್ನುವ ಘೋಷಣೆಯನ್ನು ಹೊಂದಿದೆ .ನಾನು ಎನ್ನುವುದು ಮರೆತು ನಾವು ಎನ್ನುವ ಭಾವನೆಯನ್ನು ಹೊಂದಬೇಕೆಂದು ತಿಳಿಸಿದರು.

ಜಗತ್ತಿನಲ್ಲಿ ನಾವು ಕಣ್ಮರೆಯಾದರೂ ನಮ್ಮ ಸೇವೆಯು ನಮ್ಮನ್ನು ಗುರುತಿಸುತ್ತದೆ ಎಂದು ತಿಳಿಸಿದರು. ಹಾಗೆಯೇ ಮುಖ್ಯಅತಿಥಿಗಳಾಗಿ ಶ್ರೀ ಅಶೋಕ ಬೆನ್ನೂರ್ ಅವರು ಸೇವಾ ಮನೋಭಾವನೆ ಈ ಎನ್‌ಎಸ್‌ಎಸ್ ಕಾರ್ಯಕ್ರಮಗಳಿಂದ ಉಂಟಾಗುತ್ತದೆ. ಮನೆಯಲ್ಲಿ ಮಾಡದೇ ಇರುವಂತಹ ಕೆಲಸವನ್ನು ಇಲ್ಲಿಗೆ ಬಂದ ನಂತರ ಕಲಿಯುತ್ತೇವೆ. ಅದು ನಿಸ್ವಾರ್ಥವಾಗಿ ಸೇವೆಯನ್ನು ಮಾಡಲು ಕಲಿಯುತ್ತೇವೆ. ಅಂಬಾದೇವಿ ಸನ್ನಿಧಾನದಲ್ಲಿ ಈ ಶಿಬಿರವನ್ನು ಮಾಡುವ ಅವಕಾಶ ನಿಮಗೆ ಸಿಕ್ಕಿದ್ದು ಪುಣ್ಯ ಎಂದು ತಿಳಿಸಿದರು. ಶ್ರೀ ಸತ್ಯನಾರಾಯಣ ಶ್ರೇಷ್ಠಿ ಅವರು ಓದುವ ಮಕ್ಕಳ ಮನಸ್ಥಿತಿ ಇಂದಿನ ದಿನಮಾನಗಳಲ್ಲಿ ಹದಗೆಡುತ್ತಿದೆ .ಅಂತಹ ಮನಸ್ಥಿತಿಯನ್ನು ಸುಧಾರಿಸುವ ಕೆಲಸವನ್ನು ಎನ್‌ಎಸ್‌ಎಸ್ ಮಾಡುತ್ತದೆ.

ಓದಿದ ಕೂಡಲೇ ಸರಕಾರಿ ನೌಕರಿ ಬೇಕು ಅಂತ ಅನ್ನೋದಕ್ಕಿಂತ ನೀವು ಕೊಡುವ ಮಟ್ಟದಲ್ಲಿ ಬೆಳೆಯಬೇಕು ಎಂದು ಹೇಳುತ್ತಾ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಕ್ರಮವನ್ನು ಎಲ್ಲಾ ಕಾಲೇಜಿನವರು ಸೇರಿ ಮಾಡೋಣ ಎನ್ನುವಂತಹ ಮಾತನ್ನು ತಿಳಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಅನಿಲ್ ಕುಮಾರ ಅವರು ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡು, ಗ್ರಾಮದಲ್ಲಿರುವ ಜನರಿಗೆ ಅರಿವನ್ನು ಮೂಡಿಸೋಣ ಇರುವಂತಹ ಅವಕಾಶ ಬಳಸಿಕೊಂಡು ಮುನ್ನಡೆಯೋಣ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ರಾಯಚೂರು ವಿಶ್ವವಿದ್ಯಾಲಯದ ವಿದ್ಯಾ ವಿದೇಶ ಪರಿಷತ್ತಿನ ಸದಸ್ಯರಾದ ಸತ್ಯನಾರಾಯಣ ಸೃಷ್ಟಿ ಮತ್ತು ಅನಿಲ್ ಕುಮಾರ್ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಪರಶುರಾಮ ಮಲ್ಲಾಪುರ ರವರು ವಹಿಸಿದ್ದರು. ಪ್ರಾಸ್ತಾವಿಕ ನುಡಿ ಎನ್ ಎಸ್ ಎಸ್ ಕಾರ್ಯಕ್ರಮ ಅಧಿಕಾರಿಗಳು ಶ್ರೀ ಹೊನ್ನಪ್ಪ ಬೆಳಗುರ್ಕಿ ನುಡಿದರು. ಶ್ರೀ ಮಂಜುನಾಥ ದಾಸರ,ಸಾಲ್ಗುಂದ, ಶ್ರೀ ಹುಸೇನಪ್ಪ ಜಿ ಗ್ರಾಮ ಪಂಚಾಯತ್ ಸದಸ್ಯರ ಸೋಮಲಾಪುರ, ಎಂ ರಂಗನಗೌಡ,ಶ್ರೀ ಎಸ್ ಎಸ್ ಜಿ ನೂರ್, ನೊಬಲ್ ಕಾಲೇಜಿನ ಕಾರ್ಯದರ್ಶಿಗಳಾದ ಡಾ. ಅರುಣಕುಮಾರ ಬೆರಗಿ, ಖಜಾಂಚಿಗಳಾದ ಜಯಪ್ಪ ಗೊರೆಬಾಳ, ಪ್ರಾಂಶುಪಾಲರಾದ ಶ್ರೀಮತಿ ಐಶ್ವರ್ಯ ದಳವಾಯಿ, ಪ್ರಾಚಾರ್ಯರಾದ ಶಿವಕುಮಾರ ಬಿಂಗಿ ಹಾಗೂ ಕಾಲೇಜಿನ ಉಪನ್ಯಾಸಕರು ಉಪಸ್ಥಿತಿಯಲ್ಲಿದ್ದರು. ಕಾರ್ಯಕ್ರಮದ ನಿರೂಪಣೆ ಶ್ರೀಮತಿ ಚೆನ್ನಬಸಮ್ಮ ಮಲ್ಲಾಪುರ ನೆರವೇರಿಸಿದರು ಕುಮಾರಿ ಜ್ಯೋತಿ ಸ್ವಾಗತಿಸಿದರು.

## ನೇಮಕಾತಿ ಪ್ರಕಟಣೆ

ಅಮೃತ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ನೇಮಕಾತಿ 2026–ವಿವಿಧ ಬೋಧನಾ ಸಿಬ್ಬಂದಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಅಮೃತ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ನೇಮಕಾತಿ 2026: ವಿವಿಧ ಬೋಧನಾ ಸಿಬ್ಬಂದಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಅಮೃತ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಫೆಬ್ರವರಿ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಬೋಧನಾ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಚಿತ್ರದುರ್ಗ ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 12–ಮಾರ್ಚ್–2026 ರಂದು ಅಥವಾ ಮೊದಲು ಇ–ಮೇಲ್ ಕಳುಹಿಸಬಹುದು. ಅರ್ಹ ಅಭ್ಯರ್ಥಿಗಳಿಂದ ಕೆಳಗಿನ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ ಬೋಧಕ ಸಿಬ್ಬಂದಿ ಅಗತ್ಯ ಕ್ರಮ ಸಂಖ್ಯೆ ವಿಭಾಗ ಅಗತ್ಯ ಹುದ್ದೆಗಳು : 1) ಶಾಲಾಕ್ಯ ತಂತ್ರ, ರೀಡರ್, ಉಪನ್ಯಾಸಕ 2) ಕೌಮಾರಭೃತ್ಯ (ಹುದ್ದೆ ವಿವರ ಕಾಲೇಜು ಕಚೇರಿಯಲ್ಲಿ ಲಭ್ಯ) 3) ಶರೀರ ರಚನಾ : ರೀಡರ್, ಉಪನ್ಯಾಸಕ 4) ಶರೀರ ಕ್ರಿಯಾ ; ರೀಡರ್, ಉಪನ್ಯಾಸಕ 5) ಸಂಹಿತಾ ಸಿದ್ಧಾಂತ : ರೀಡರ್ , ಉಪನ್ಯಾಸಕ (2 ಹುದ್ದೆಗಳು) 6) ರೋಗ ನಿಧಾನ: ಉಪನ್ಯಾಸಕ 7) ಕಾಯಚಿಕಿತ್ಸೆ : ರೀಡರ್ 8) ಪಂಚಕರ್ಮ : ರೀಡರ್ , ಉಪನ್ಯಾಸಕ 9) ಶಲ್ಯತಂತ್ರ : ಉಪನ್ಯಾಸಕ 10 ) ಪಿಟಿಎಸ್ಆರ್ (PTSR) : ಉಪನ್ಯಾಸಕ, ಶೈಕ್ಷಣಿಕ ಅರ್ಹತೆ, ಅನುಭವ, ವೇತನ ಹಾಗೂ ಸೇವಾ ನಿಯಮಗಳು: National Commission for Indian System of Medicine (ಎನ್‌ಸಿಐಎಸ್‌ಎಂ), ನವದೆಹಲಿ ಅವರ ನಿಯಮಾವಳಿಗಳ ಪ್ರಕಾರ ಇರಲಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಜೀವನ ವಿವರ (Resume) ಅನ್ನು ಕೆಳಗಿನ ಇಮೇಲ್ ವಿಳಾಸಗಳಿಗೆ ಕಳುಹಿಸಬಹುದು ಅಥವಾ ನಿಗದಿತ ಸಮಯದಲ್ಲಿ (ಬೆಳಿಗ್ಗೆ 10.00 ರಿಂದ ಸಂಜೆ 5.00 ರವರೆಗೆ) ಕಾಲೇಜು ಕಚೇರಿಗೆ ಭೇಟಿ ನೀಡಿ ಸಲ್ಲಿಸಬಹುದು.

ಅಧಿಸೂಚನೆ ಬಿಡುಗಡೆ ದಿನಾಂಕ: 25–02–2026

ಇ–ಮೇಲ್ ಕಳುಹಿಸಲು ಕೊನೆಯ ದಿನಾಂಕ: 12–ಮಾರ್ಚ್–2026

ಅಧಿಕೃತ ವೆಬ್‌ಸೈಟ್: amruthaayurcta.org


# ಸೋಮಲಾಪುರದಲ್ಲಿ 40 ವರ್ಷಗಳಿಂದ 80 ಬಡ ಕುಟುಂಬಗಳು ವಾಸ

## ಪ್ರಭಾವಿ ವ್ಯಕ್ತಿಗಳಿಂದ ಜೀವ ಬೆದರಿಕೆ, ಬಡವರನ್ನ ಒಕ್ಕಲೆಬ್ಬಿಸುವ ಕುತಂತ್ರ!

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಸಾಲಗುಂದ ಹೋಬಳಿಯ ಸೋಮಲಾಪುರ ಗ್ರಾಮದಲ್ಲಿ ಸರ್ವೆ ನಂ–197|1 ಮತ್ತು 198|2 ರಲ್ಲಿ ಈಗಾಗಲೇ ಸುಮಾರು 40 ವರ್ಷಗಳಿಂದ ವಾಸ ಮಾಡುತ್ತಿರುವ ಎಲ್ಲಾ ಸಮುದಾಯದ 80ಕ್ಕೂ ಹೆಚ್ಚು ಬಡ ಕುಟುಂಬಗಳನ್ನು ಒಕ್ಕಲೆಬ್ಬಿಸುವಂತಹ ತಂತ್ರಗಾ–ರಿಕೆ ನಡೆಯುತ್ತಿದೆ ಎಂದು ಸೋಮಲಾಪುರ ನಿವಾಸಿಗರು ಆರೋಪ ಮಾಡಿದರು.**

ನಾವು ವಾಸ ಮಾಡುತ್ತಿರುವ ಸ್ಥಳದಲ್ಲಿ ಸರ್ಕಾರದಿಂದ ನೀಡುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ನಮ್ಮ ಗ್ರಾಮ ಪಂಚಾಯತಿಯಿಂದ ಪಡೆದುಕೊಂಡು ಇಲ್ಲಿತನಕ ಯಾವುದೇ ಅಡ್ಡಿ ಆತಂಕಳು, ಯಾರ ಆಕ್ಷೇಪಣೆಗಳು ಸಹ ಇಲ್ಲದೇ ನಾವು ಬಡವರು ವಾಸ ಮಾಡಿ ನಮ್ಮ ಬದುಕು ಕಟ್ಟಿಕೊಂಡಿದ್ದೇವೆ, ಆದರೆ ಇತ್ತೀಚೆಗೆ ಸರ್ವೆ ನಂಬರಿಗೆ ಸಂಬಂಧಿಸಿದಂತೆ ಊರಿನ ಕೆಲವು ಪ್ರಭಾವಿ ವ್ಯಕ್ತಿಗಳು ಹಾಗೂ ಮಧ್ಯವರ್ತಿಗಳ ಮುಖಾಂತರ



ಅಲ್ಲಿ ವಾಸ ಮಾಡುವ ನಮ್ಮೆಲ್ಲ ಕುಟುಂಬದವ–ರಿಗೂ ಜೀವ ಬೆದರಿಕೆ ಹಾಕಿ, ಮನೆಗಳನ್ನು ತೆರವು ಮಾಡುವಂತೆ ದೌರ್ಜನ್ಯ ಎಸಗುತ್ತಿದ್ದಾರೆ.

ಈ ಕಾರಣದಿಂದ ನಮಗೆ ಜೀವ ಭಯ ಕಾಡುವುದರ ಜೊತೆಗೆ 40 ವರ್ಷಗಳಿಂದಲೂ ವಾಸ ಮಾಡುತ್ತಿರುವ 80 ಕುಟುಂಬಗಳಿಗೆ ತುಂಬಾ ಅನ್ಯಾಯವಾಗುತ್ತಿದೆ. ಜೀವನ ನಡೆಸಲು ಕೂಡ ಕಷ್ಟವಾಗುತ್ತಿದೆ. ನಮಗೆ ಈಗ ಇದ್ದ ಜಾಗದಲ್ಲೇ ಇರಲು ಅವಕಾಶ ಮಾಡಿಕೊಡಬೇಕು. ಸರ್ಕಾರದ ಸವಲತ್ತಿಗೆ ಒಳಪಡಿಸಿ, ಆ ಜಾಗದಲ್ಲಿರುವ ಕುಟುಂಬಗಳಿಗೆ ಮಂಜೂರು ಮಾಡಿಕೊಟ್ಟು ಬಡವರು ಸಮಾಜದಲ್ಲಿ ಬದುಕಲು ನೇರವಾಗುವಂತೆ ತಾಲೂಕು ದಂಡಾಧಿಕಾರಿ ಅರುಣ್ ಕುಮಾರ್ ದೇಸಾಯಿ ಅವರಿಗೆ ಮನವಿ ಸಲ್ಲಿಸಿ ವಿನಂತಿ ಮಾಡಿಕೊಂಡರು. ಈ ಸಂದರ್ಭದಲ್ಲಿ: ರಾಘವೇಂದ್ರ, ಚಂದ್ರಶೇಖರ, ಯಂಕೋಬ, ಹುಸೇನಪ್ಪ, ನಾಗರಾಜ, ಶೇಕ್ಷಾವಲಿ, ವೀರೇಶಪ್ಪ ಕೋರಿ, ದುರುಗಪ್ಪ,

**ಇದೇ ವೇಳೆ ಸುಡಾ ಅಧ್ಯಕ್ಷ ಬಾಬುಗೌಡ ಬಾದರ್ಲಿ ಆಗಮಿಸಿ ನಿರಾಶ್ರಿತರ ಪರವಾಗಿ ತಹಶೀಲ್ದಾರರಿಗೆ ಮನವಿ ಮಾಡಿ, ಕಾರಟಗಿ ತಾಲೂಕಿನ ಗುರುಶಾಂತಪ್ಪ ಅವರ ಜಾಗದಲ್ಲಿ ಸುಮಾರು ವರ್ಷಗಳಿಂದಲೂ ವಾಸ ಮಾಡುತ್ತಿರುವ ಸುಮಾರು 80 ಬಡ ಕುಟುಂಬಗಳಿಗೆ ನ್ಯಾಯ ಒದಗಿಸಿ ಕೊಡಿ, 3 ಎಕರೆಗಿಂತಲೂ ಹೆಚ್ಚು ಇರುವ ಭೂಮಿಯನ್ನು ಮನೆಯಿಲ್ಲದ ಬಡವರಿಗಾಗಿ ಮನೆಯಿಲ್ಲದವರು ಮನೆಯನ್ನೋ, ಗುಡಿಸಲನ್ನೋ, ಹಾಕಿಕೊಂಡು ಇರಲಿ ಎಂದು ಬಿಟ್ಟು ಹೋಗಿದ್ದಾರೆ, ಬಿಟ್ಟು ಹೋದ ಜಾಗದಲ್ಲಿ 40 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಈ ಬಡ ಕುಟುಂಬದವ–ರಿಗೆ ನೆರವಾಗಿ ಎಂದು ದಂಡಾಧಿಕಾರಿಗಳಿಗೆ ತಿಳಿಸಿದರು.)**

ಸಣ್ಣರಡ್ಡೆಪ್ಪ, ಪ್ರಕಾಶ, ಹನುಮಂತ, ಮಹಿಬೂಬ್, ಭಾಷಾಸಾಬ್, ರಡ್ಡೆಪ್ಪ, ಸಿದ್ದಲಿಂಗಪ್ಪ, ಮುನ್ನಮ್ಮ, ಅಸನಬಿ, ಈರಮ್ಮ, ಹಾಗೂ ಗಂಗಮ್ಮ, ಅಲೀಂಬೇಗಂ, ಸೇರಿದಂತೆ ಅನೇಕರಿದ್ದರು.

# ಯಡಿಯೂರಪ್ಪನವರು ದೀನ ದಲಿತರ ಹಿಂದುಳಿದ ವರ್ಗದ ಆಶಾಕಿರಣ :ಮಾಜಿ ಶಾಸಕ ಪ್ರತಾಪಗೌಡ ಪಾಟೀಲ



❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದಲ್ಲಿ ಬಿಜೆಪಿ ಮಂಡಲ ವತಿಯಿಂದ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪನವರ ಹುಟ್ಟುಹಬ್ಬವನ್ನು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಅವರು ಇಲ್ಲಿನ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲ ವಿತರಿಸಿ ಹಾಗೂ ಮಸ್ಕಿ ಹಳೆ ಬಸ್ ನಿಲ್ದಾಣದಲ್ಲಿ ವ್ಯಾಪಾರಿಗಳಿಗೆ ಮತ್ತು ಸಾರ್ವಜನಿಕ–ರಿಗೆ ಸಿಹಿ ಹಂಚಿ ಶುಕ್ರವಾರ ಹುಟ್ಟು ಆಚರಿಸಿದರು.**

ಈ ಸಂದರ್ಭದಲ್ಲಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್‌ಅವರು ಮಾತನಾಡಿ ಬಿಎಸ್ ಯಡಿಯೂರಪ್ಪನವರು ರಾಜ್ಯ ಕಂಡ ಧೀಮಂತ ನಾಯಕರು ರೈತ ಪರ ಹೋರಾಟಗಾರ, ಬಡವರ ಬಂಧು, ಜನನಾಯಕ, ಕಾರ್ಯಕರ್ತರ ಮಾರ್ಗದರ್ಶಕರು, ರಾಜಕೀಯ ಕ್ಷೇತ್ರದಲ್ಲಿ 50 ವಸಂತಗಳನ್ನು ಪೂರೈಸಿದ್ದಾರೆ. ನನಗೆ ರಾಜ–ಕೀಯ ಕ್ಷೇತ್ರಕ್ಕೆ ಬರಲು ಕಾರಣೀಭೂತರು, ಮಾಗದರ್ಶಕರು ಕರ್ನಾಟಕ ಕಂಡ ಅತ್ಯಂತ ಜನಪ್ರಿಯ ನಾಯಕರು, ಹೋರಾಟದ ಮೂಲಕವೇ ಜನರನ್ನು ಬಡಿದೆಬ್ಬಿಸಿದ ಧೀಮಂತರು ಬಿ.ಎಸ್. ಯಡಿಯೂರಪ್ಪನವರು ಪ್ರತಿಭಟನೆ, ಸಾಧಿಸುವ ಛಲ, ನೆಟ್ಟ ಗುರಿ ಇಟ್ಟ ಹೆಜ್ಜೆ, ರೈತರು, ಬಡವರು, ದೀನದಲಿತರು, ಪರಿಶಿಷ್ಟ ಪಂಗಡ, ಹಿಂದುಳಿದವರ ಪಾಲಿನ ಆಶಾಕಿರಣವಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ, ಪುರಸಭೆ ಅಧ್ಯಕ್ಷ ಸುರೇಶ್ ಹರಸೂರು, ಬಿಜೆಪಿ ಮುಖಂಡರಾದ ಮಲ್ಲಪ್ಪ ಅಂಕಸದೊಡ್ಡಿ, ಡಾ. ಬಿ. ಎಚ್. ದಿವಟರ, ಪಂಪಣ್ಣ ಗುಂಡಳ್ಳಿ ಯಲ್ಲೋ ಜಿ ರಾವ್ ಕೊರೆ?ಕಾರ, ಪ್ರಸನ್ನ ಪಾಟೀಲ, ಶಿವಶಂಕ್ರಪ್ಪಹಳ್ಳಿ, ಶ್ರೀನಿವಾಸ್ ಇಲ್ಲೂರು, ಶಿವಕುಮಾರ್, ಸುಗಣ್ಣ ಬಾಳೆಕಾಯಿ, ನಾಗರಾಜ್ ಎಂಬಲದ, ರಮೇಶ್ ಉದ್ಬಾಳ್, ಮೌನೇಶ್ ನಾಯಕ್, ರಮೇಶ್ ತೀರ್ಥಭಾವಿ, ಪುರಸಭೆ ಸದಸ್ಯರಾದ ಮೌನೇಶ್ ಮುರಾರಿ, ಚೇತನ್ ಪಾಟೀಲ್, ಮಲ್ಲಿಕಾರ್ಜುನ ಬ್ಯಾಳಿ, ಭರತ್ ಕುಮಾರ್, ರಮೇಶ್ ಗುಡಸಲಿ, ಬಸವರಾಜ್ ಬುಕ್ಕಣ್ಣ, ಡಾ. ವೆಂಕಟೇಶ್ ಕೋಳಬಾಳ ಸೇರಿದಂತೆ ಇನ್ನಿತರರಿದ್ದರು.

## 1ನೇ ಪುಟದಿಂದ....

ಶಿಗ್ಗಾಂವಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಮುಸ್ಲಿಂ ಯಾಸಿರ್ ಅಹ್ಮದ್ ಖಾನ್ ಪಠಾಣ್ ಅವರನ್ನು ಕಣಕ್ಕಿಳಿಸುವ ಮೂಲಕ ಗೆಲವು ಸಾಧಿಸಿತ್ತು. ಈ ಮೂಲಕ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಅವರನ್ನು ಸೋಲು ಕಾಣುವಂತೆ ಮಾಡಿತ್ತು. ಕಾಂಗ್ರೆಸ್ ಪರವಾಗಿ ಚುನಾವಣಾ ಉಸ್ತುವಾರಿ ವಹಿಸಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಅಹಿಂದ ಮತದಾರರನ್ನು ಒಗ್ಗೂಡಿಸುವ ಮೂಲಕ ಪಠಾಣ್ ಅವರ ಗೆಲುವನ್ನು ಖಚಿತಪಡಿಸಿದ್ದರು ಎಂದು ರಾಜಕೀಯ ವಿಶ್ಲೇಷಕರು ತಿಳಿಸಿದ್ದಾರೆ. ಇನ್ನು ಬಾಗಲಕೋಟೆ ಟಿಕೆಟ್ ವಿಚಾರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಕಠಿಣ ಪರಿಸ್ಥಿತಿ ಎದುರಾಗುವ ಸಾಧ್ಯತೆಗಳಿವೆ. ಮೇಟಿ ಅವರ ಪುತ್ರರಾದ ಮಲ್ಲಿಕಾರ್ಜುನ್ ಮತ್ತು ಉಮೇಶ್ ಮತ್ತು ಪುತ್ರಿಯರಾದ – ಮಾಜಿ ಜಿಪಂ ಅಧ್ಯಕ್ಷೆ ಬಯಕ್ಕ ಮೇಟಿ ಮತ್ತು ಮಹಾದೇವಿ ಮೇಟಿ – ಟಿಕೆಟ್‌ಗಾಗಿ ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ ಹೇರುತ್ತಿದ್ದಾರೆ ಇದರಂತೆ ಮೇಟಿ ಕುಟುಂಬವನ್ನು ಒಂದುಗೂಡಿಸಲು ಸತೀಶ್ ಜಾರಕಿಹೊಳಿ ಚರ್ಚೆ ನಡೆಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮನವೊಲಿಸುವ ಪ್ರಯತ್ನ ನಡೆಸುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

# ಫೆ.15ರಂದು ಶ್ರೀ ಹೊಳೆ ಹುಚ್ಚೇಶ್ವರ ಜಾತ್ರೆ ಹಾಗೂ "ನೀರಲಗಿ ಉತ್ಸವ–2026"

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ನೀರಲಗಿ ಗ್ರಾಮದಲ್ಲಿ ಇದೇ ಫೆಬ್ರವರಿ 15 ರಂದು ಶ್ರೀ ಹೊಳೆ ಹುಚ್ಚೇಶ್ವರ ಮೂರ್ತಿ ಪ್ರತಿಷ್ಠಾಪನೆಯ ಜಾತ್ರಾ ಮಹೋತ್ಸವ ಜರುಗಲಿದೆ. ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ,ಮೊದಲನೇಯದಾಗಿ ಪುರಾಣ ಪ್ರವಚನ ಕಾರ್ಯಕ್ರಮವನ್ನು ಶ್ರೀ ಹುಚ್ಚೇಶ್ವರ ಸಂಸ್ಥಾನ ಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಮ.ನಿ.ಪ್ರ ಹುಚ್ಚೇಶ್ವರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವನ್ನು ವಹಿಸಿಕೊಳ್ಳಲಿದ್ದು**




**, ಗುಳೇದಗುಡ್ಡ ಹಾಗೂ ಮೈಲೇಶ್ವರ ಮುರುಘಾ ಮಠದ ಮಹಾಸ್ವಾಮಿಗಳಾದ ಶ್ರೀ.ಮ.ನಿ.ಪ್ರ ಕಾಶೀನಾಥ ಮಹಾಸ್ವಾಮಿಗಳು ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಿದ್ದಾರೆ.**

ಬುಧವಾರ ಫೆ.4 ರಿಂದ ಪ್ರತಿನಿತ್ಯ ಸಾಯಂಕಾಲ 7:30 ರಿಂದ 9:30ವರೆಗೆ ಹಾನಗಲ್ಲ ಶ್ರೀ ಶಿವಕುಮಾರ ಶಿವಯೋಗಿಗಳು ಪ್ರವಚನವನ್ನು ನೀಡಲಿದ್ದಾರೆ. ಫೆ.14 ಸಾಯಂಕಾಲ 9:30ರಂದು ಹರ ಗುರು ಚರಮೂರ್ತಿ ರವರ ಸಮ್ಮುಖದಲ್ಲಿ ಪುರಾಣ ಪ್ರವಚನ ಮಹಾಮಂಗಳಗೊಳ್ಳಲಿದೆ. ಫೆ.15 ರಂದು ಬೆಳಿಗ್ಗೆ 6 ಗಂಟೆಗೆ ಶ್ರೀ ಹೊಳೆ ಹುಚ್ಚೇಶ್ವರ ಮಹಾಮೂರ್ತಿಗೆ ರುದ್ರಾಭಿಷೇಕ , ಸಹಸ್ರ ಬಿಲ್ವಾರ್ಚನೆ ಜರುಗುವುದು.

ಬೆ. 8.30 ಕ್ಕೆ ಪುರಾಣ ಮೆರವಣಿಗೆ ಜೊತೆಗೆ ಸುಮಂಗಲೆಯರಿಂದ ಕುಂಬ, ಕಳಸ, ವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದೇವಸ್ಥಾನಕ್ಕೆ ತಲುಪುಲಾಗುವುದು. ಕೊನೆಯದಾಗಿ ದೇವಸ್ಥಾನದ ಆವರಣದಲ್ಲಿ ಧರ್ಮಸಭೆ ಜರುಗುತ್ತದೆ. ಮಧ್ಯಾಹ್ನ 12:30 ರಿಂದ ಮಹಾಪ್ರಸಾದ ನಡೆಸಲಾಗುವುದು. ಗ್ರಾಮದ ಹಾಗೂ ಸುತ್ತಮುತ್ತಲಿನ ಭಕ್ತಾದಿಗಳು ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿ ವಿಜೃಂಭಣೆಯಿಂದ ಜಾತ್ರೆ ಹಾಗೂ "ನೀರಲಗಿ ಉತ್ಸವ–2026" ವನ್ನು ನೆರವೇರಿಸಬೇಕಾಗಿ ಈ ಮೂಲಕ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ನೂತನ ಮಸೀದಿ ಉದ್ಘಾಟನೆ

❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ಪಟ್ಟಣದ ಷರೀಫ್ ನಗರದಲ್ಲಿ ನೂತನವಾಗಿ ನಿರ್ಮಿಸಿದ ಮಸೀದಿಯನ್ನು ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಕಾಡ ಅಧ್ಯಕ್ಷ ಹಸನಸಾಬ ದೋಟಿಹಾಳ ಉದ್ಘಾಟಿಸಿದರು.**



ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಅಮರೇಗೌಡ ಪಾಟೀಲ್ ಬಯ್ಯಾಪುರ, ಕುಷ್ಟಗಿ ಟೌನ್ ಪಂಚ್ ಕಮಿಟಿ ಅಧ್ಯಕ್ಷ ಅಹ್ಮದ್ ಸಾಬ್ ಆದೋನಿ, ಉಪಾಧ್ಯಕ್ಷರಾದ ಮೈನುದ್ದೀನ್ ಮುಲ್ಲಾ ಹಾಗೂ ಸಮಾಜದ ಮುಖಂಡರು ಭಾಗವಹಿಸಿದ್ದರು.

# ಕಲಾಕೃತಿಯಲ್ಲಿ ಮಣ್ಣಿನ ಮಡಿಕೆಗಳನ್ನು ಅಲಂಕಾರಗೊಳಿಸಿ ಕಾಳು ಮತ್ತು ನೀರು ಹಾಕಿ ಗಿಡಮರಗಳಿಗೆ ಕಟ್ಟಿ ಪ್ರಾಣಿ ಪಕ್ಷಿಗಳಿಗೆ ಮಾನವೀಯತೆ ತೋರುತ್ತಿರುವ ವಿದ್ಯಾರ್ಥಿಗಳ ಕಾರ್ಯ ಶ್ಲಾಘನೀಯ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಮಲ್ಲಾಪುರ ಗ್ರಾಮದ ಉನ್ನತಿಕರಿಸಿದ ಸರಕಾರಿ ಹಿರಿಯ ಪ್ರಾಥ–ಮಿಕ ಶಾಲೆಯಲ್ಲಿ ಶಾಲೆಯ ವಿದ್ಯಾರ್ಥಿಗಳೇ ಮಡಿಕೆಗಳಿಗೆ ಕಲಾಕೃತಿಗಳನ್ನು ಬಿಡಿಸುವ ಮೂಲಕ ಅಲಂಕಾರಗೊಳಿಸಿ ಶಾಲೆಯಲ್ಲಿರುವ ಎಲ್ಲಾ ಗಿಡಗಳಿಗೆ ಮಡಿಕೆಗಳನ್ನು ಕಟ್ಟಿ ಕಾಳು ಮತ್ತು ನೀರು ಹಾಕಿ ಪ್ರಾಣಿ ಪಕ್ಷಿಗಳಿಗೆ ಬಿಸಿಲು ಮತ್ತು ನೀರಿನ ದಾಹ ತೀರಿಸಲು ಮುಂದಾಗಿರುವುದು ಎಲ್ಲ ಪರಿಸರ ಪ್ರೇಮಿಗಳ ಮೆಚ್ಚುಗೆಗೆ ಪಾತ್ರರಾದರು.**



ಇದೇ ಸಂಧರ್ಭದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪರಿಸರ ರಾಜ್ಯ ಪ್ರಶಸ್ತಿ ಪುರಸ್ಕೃತರು ಹಾಗೂ ವನಸಿರಿ ಪೌಂಡೇಷನ್ ರಾಜ್ಯಾಧ್ಯಕ್ಷ ಅಮರೇಗೌಡ ಮಲ್ಲಾಪುರ ಬೇಸಿಗೆ ಕಾಲ ಪ್ರಾರಂಭವಾಗಿರುವುದರಿಂದ ಮಲ್ಲಾಪುರ ಶಾಲೆಯಲ್ಲಿ ಪ್ರಾಣಿ ಪಕ್ಷಿಗಳಿಗೆ ಗುಟುಕು ನೀರಿನ ಅರವಟ್ಟಿಗೆ ಅಭಿಯಾನ ಕೈಗೊಳ್ಳಲಾಗಿದೆ. ಇಲ್ಲಿನ ಶಾಲೆಯ ಶಿಕ್ಷಕರು,ವಿದ್ಯಾರ್ಥಿಗಳು ಬೇಸಿಗೆ ಕಾಲ ಆರಂಭವಾಗಿರುವುದರಿಂದ ಪ್ರಾಣಿ ಪಕ್ಷಿಗಳ ಸಂತತಿ ಉಳುವಿಗಾಗಿ ಸ್ವತಃ ತಾವೇ ಮಣ್ಣಿನ ಮಡಿಕೆಗಳಿಗೆ ಕಲಾಕೃತಿ ಮೂಲಕ ಅಲಂಕಾರಗೊಳಿಸಿ ಗಿಡಮರಗಳಿಗೆ ಕಟ್ಟಿ ಕಾಳು ಮತ್ತು ನೀರು ಹಾಕಿ ಮಾನವೀಯತೆ ತೋರುತ್ತಿರುವ ಕಾರ್ಯ ಶ್ಲಾಘನೀಯ.

ಇದೇ ರೀತಿ ಪ್ರತಿಯೊಬ್ಬರೂ ತಮ್ಮ ಶಾಲೆ,ಮನೆ ಮಹಡಿಗಳ ಮೇಲೆ ಹಾಗೂ ಸುತ್ತಮುತ್ತ ಇರುವ ಗಿಡಗಳ ರಂಬೆ ಕೊಂಬೆಗಳಿಗೆ ಮಣ್ಣಿನ ಮಡಿಕೆಗಳನ್ನು ಕಟ್ಟಿ ಕಾಳು ನೀರು ಹಾಕಿ ಪ್ರಾಣಿ ಪಕ್ಷಿಗಳ ಸಂಕುಲ ಉಳಿಸಲು ಮುಂದಾಗಬೇಕು ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ಷಣ್ಮುಖಗೌಡ ಅಖಿಕ ಸಮೂಹ ಸಂಪನ್ಮೂಲ ಕೇಂದ್ರ ಪಗಡದಿನ್ನಿ,ಸಂಗಪ್ಪ ಮುಖ್ಯ ಗುರುಗಳು,ಶಿಕ್ಷಕರಾದ ಅಮರೇಶ, ವನಸಿರಿ ಪೌಂಡೇಷನ್ ರಾಜ್ಯ ಸಾಮಾಜಿಕ ಜಾಲತಾಣ ಅಧ್ಯಕ್ಷ ಚನ್ನಪ್ಪ ಕೆ.ಹೊಸಹಳ್ಳಿ,ಶ್ರೀಮತಿ ಅನುಸೂಯ ಶ್ರೀಮತಿ ಅಂಬಮ್ಮ ಶ್ರೀಮತಿ ಸುಗಮ್ಮ ಹಾಗೂ ವಿದ್ಯಾರ್ಥಿಗಳು ಇದ್ದರು.

# ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸಿ ಬೃಹತ್ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸುವಂತೆ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ' ಫೆ. 24ರಂದು ಧಾರವಾಡದಲ್ಲಿ ನಡೆಸಿದ ಬೃಹತ್ ಪ್ರತಿಭಟನೆ. ಯುವಜನರ ಉದ್ಯೋಗದ ನಿರೀಕ್ಷೆಗಳಿಗೆ ಸ್ಪಂದಿಸದಿರುವ ರಾಜ್ಯ ಸರ್ಕಾರದ ವೈಫಲ್ಯಕ್ಕೆ ಹಿಡಿದಿರುವ ಕನ್ನಡಿಯಾಗಿದೆ.**

50 ಸಾವಿರ ಹುದ್ದೆಗಳ ನೇಮಕಾತಿಗೆ ಹಣಕಾಸು ಇಲಾಖೆ ಅನುಮೋದನೆ ನೀಡಿದ್ದು, ಸರ್ಕಾರ ಅಧಿಸೂಚನೆ ಹೊರಡಿಸದಿದ್ದರೆ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಳ್ಳುತ್ತೇವೆ ಎಂದು 'ಅಕ್ಸಾ' ಸಂಘಟನೆ ಈಗಾಗಲೇ ತಿಳಿಸಿದ್ದು, ನಾಡಿನ ಎಲ್ಲ ಭಾಗದ ನಿರುದ್ಯೋಗಿ ಯುವಜನರ ಸಂಕಟ ಹಾಗೂ ಹತಾಶೆಯನ್ನು ಗಂಭೀರವಾಗಿ ಪರಿಗಣಿಸಿ ಉದ್ಯೋಗಾಕಾಂಕ್ಷಿಗಳ ಬೇಡಿಕೆಯನ್ನು ಈಡೇರಿಸಬೇಕು ಎಂದು ಈ ಮೂಲಕ ನಮ್ಮ ಸಂಘಟನೆ ಆಗ್ರಹಿಸುತ್ತದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿನ 79.694 ಹುದ್ದೆಗಳು ಸೇರಿ ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದಿರುವ ಒಟ್ಟು 2,84,881 ಹುದ್ದೆಗಳನ್ನು ಸರ್ಕಾರ ತುಂಬಬೇಕಾಗಿದೆ.

ಈ ಹುದ್ದೆಗಳನ್ನು ವರ್ಷಗಟ್ಟಲೆ ತುಂಬದೆ



ಉಳಿಸಿಕೊಂಡಿರುವ ಸರ್ಕಾರದ ಧೋರಣೆಯು ಯುವಜನರನ್ನು ಉದ್ಯೋಗದ ಹಕ್ಕಿನಿಂದ ವಂಚಿಸಿದ ಹಾಗೂ ಆಡ ಆಡಳಿತಯಂತ್ರ ದುರ್ಬಲಗೊಳ್ಳಲು ಕಾರಣವಾಗಿದೆ. ಒಂದು ಉದ್ಯೋಗ ಇಡೀ ಕುಟುಂಬದ ದಿಕ್ಕುದೆಸೆ ಬದಲಿಸುವ ಸಾಮರ್ಥ್ಯ ಹೊಂದಿರುತ್ತದೆ. ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆಯನ್ನು ಪೊಲೀಸರ ಮೂಲಕ ಹತ್ತಿಕ್ಕುವ ಪ್ರಯತ್ನವೂ ನಡೆದಂತಿದೆ. ಇಂಥ ಅಸೂಕ್ಷ್ಮ ನಡವಳಿಕೆ ಸರ್ಕಾರಕ್ಕೆ ಶೋಭೆ ತರುವಂತಹದ್ದಲ್ಲ. ಪ್ರತಿಭಟನಾಕಾರರ ಭಾವನೆಗಳಿಗೆ ಸರ್ಕಾರ ಸಹಾನುಭೂತಿಯಿಂದ ಸ್ಪಂದಿಸಬೇಕು. ನೇಮಕಾತಿ ಪ್ರಕ್ರಿಯೆ ಮುಂದೆ ಹೋದಷ್ಟೂ ಉದ್ಯೋಗಾಕಾಂಕ್ಷಿಗಳ ಹತಾಶೆ ಹೆಚ್ಚುತ್ತದೆ. ಅವರನ್ನು ನೆಚ್ಚಿಕೊಂಡ ಕುಟುಂಬಗಳ ಸಂಕಷ್ಟವೂ ಮುಂದುವ–ರಿಯುತ್ತದೆ. ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳಲು ರಾಜಕೀಯ ಪಕ್ಷಗಳು ನೇರ ಹೊಣೆಯಾಗಿವೆ.

ಖಾಲಿ ಹುದ್ದೆಗಳನ್ನು ತುಂಬುವುದು ಹಾಗೂ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದು ಯಾವ ಪಕ್ಷಕ್ಕೂ ಆದ್ಯತೆಯ ವಿಷಯವಾಗಿಲ್ಲ. ರಾಜ್ಯದಲ್ಲಿ ಲಕ್ಷಾಂತರ ಸರ್ಕಾರಿ ಹುದ್ದೆಗಳು ಭರ್ತಿ ಆಗದಿರುವುದರಲ್ಲಿ ಆಡಳಿತ ಪಕ್ಷದಷ್ಟೇ ವಿರೋಧಪಕ್ಷದ ಹೊಣೆಗಾರಿಕೆಯೂ ಇದೆ. ನೇಮಕಾತಿಗಳು ನನೆಗುದಿಗೆ ಬಿದ್ದಿರುವುದಕ್ಕೆ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ರಾಜ್ಯ ಬಿಜೆಪಿ, ಅದೇ ಪ್ರಶ್ನೆಯನ್ನು ಕೇಂದ್ರ ಸರ್ಕಾರಕ್ಕೆ ಕೇಳುವುದಿಲ್ಲ. ಯುವಜನರನ್ನು ಓಟ್ ಬ್ಯಾಂಕ್ ರೂಪದಲ್ಲಷ್ಟೇ ನೋಡುವ ರಾಜಕೀಯ ಪಕ್ಷಗಳು, ನಿರುದ್ಯೋಗದ ಸಮಸ್ಯೆಯನ್ನು ಮರೆಮಾಚಲಿಕ್ಕಾಗಿ ಯುವಜನರನ್ನು ದಾರಿತಪ್ಪಿಸಲು ಪ್ರಯತ್ನಿಸಿವೆ.

ನಿರುದ್ಯೋಗ ಸಮಸ್ಯೆ ಆರ್ಥಿಕ ಸಮಸ್ಯೆಯಾಗಿಯಷ್ಟೇ ಉಳಿಯದೆ ಸಾಮಾಜಿಕ ಬಿಕ್ಕಟ್ಟಾಗಿಯೂ ಪರಿಣಮಿಸಿರುವ ಸಂದರ್ಭದಲ್ಲಿ, ವಿಭಜಕ ರಾಜಕಾರಣಕ್ಕಿಂತಲೂ ಜೀವನ ನಿರ್ವಹಣೆಗೆ ಉದ್ಯೋಗ ಅಗತ್ಯ ಎನ್ನುವ ಅರಿವು ವಿದ್ಯಾರ್ಥಿ, ಯುವಜನರಲ್ಲಿ ಬಂದಿದೆ. ಈ ನಡುವೆ ಕೇಂದ್ರದ ಬಿಜೆಪಿ ಸರ್ಕಾರ ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿತ್ತು. ಆದರೆಈ ನಡುವೆ ಕೇಂದ್ರದ ಬಿಜೆಪಿ ಸರ್ಕಾರ ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿತ್ತು. ಆದರೆ ವರ್ಷದಿಂದ ವರ್ಷಕ್ಕೆ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಖಾಲಿ ಇರುವ ಹುದ್ದೆಗಳನ್ನು ಪ್ರತಿವರ್ಷ ನಿಗದಿತವಾಗಿ ಭರ್ತಿ ಮಾಡಿಕೊಳ್ಳದೇ ಖಾಸಗೀಕರಣಕ್ಕೆ ಆದ–ೖತೆ ನೀಡುವ ಮೂಲಕ ಗುತ್ತಿಗೆ ಪದ್ಧತಿಯನ್ನು ಪರೋಕ್ಷವಾಗಿ ಜಾರಿಗೊಳಿಸುತ್ತಿರುವುದು ಈ ಸರ್ಕಾರಗಳ ಹೊಣೆಗೇಡಿತನಕ್ಕೆ ಸಾಕ್ಷಿಯಾಗಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ, ಯುವಜನರು ಹಾಗೂ ಉದ್ಯೋಗಾಕಾಂಕ್ಷಿಗಳ ಬೇಡಿಕೆಯಂತೆ ಕೂಡಲೇ ನೇಮಕಾತಿಗೆ ನೋಟಿಫಿಕೇಶನ್ ಹೊರಡಿಸಬೇಕೆಂದು ಈ ಮೂಲಕ ಆಗ್ರಹಿಸುತ್ತೇವೆ. ನಿರುದ್ಯೋಗ ಸಮಸ್ಯೆ ಹೆಚ್ಚಿದ್ದು, ಈ ಭಾಗದ ಉದ್ಯೋಗಾಕಾಂಕ್ಷಿಗಳಿಗೆ ಕೌಶಲ್ಯ ತರಬೇತಿ ಕೇಂದ್ರಗಳನ್ನು ಆರಂಭಿಸಿ, ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಒದಗಿಸಬೇಕು. ಈ ಸಂದರ್ಭದಲ್ಲಿ ವಿದ್ಯಾರ್ಥಿ ಮುಖಂಡರಾದ ಪ್ರವೀಣ್ ದುಮತಿ ಇರ್ಫಾನ್ ವಕೀಲರು, ಪರಶುರಾಮ್ ಬೀರಪ್ಪ ಬಾಲರಾಜ್ ನಾಗರಾಜ್ ಶಬ್ಬೀರ್ ವಿವಿಧ ಕಾಲೇಜ್ ವಿದ್ಯಾರ್ಥಿಗಳ ಭಾಗವಯಿಸಿದ್ದರು

## ಬೇಡಿಕೆಗಳು

**1) ರಾಜ್ಯದ ವಿವಿಧ ಇಲಾಖೆಯಲ್ಲಿ ಖಾಲಿಯಿರುವ 2,84,881 ಹುದ್ದೆಗಳನ್ನು ಹಂತ ಹಂತವಾಗಿ ಶೀಘ್ರವಾಗಿ ನೇಮಕಾತಿ ಮಾಡಿಕೊಳ್ಳಲೇಬೇಕು.**

**2) 50 ಸಾವಿರ ಹುದ್ದೆಗಳ ನೇಮಕಾತಿಗೆ ಹಣಕಾಸು ಇಲಾಖೆ ಅನುಮೋದನೆ ನೀಡಿದ್ದು, ರಾಜ್ಯ ಸರ್ಕಾರ ಕೂಡಲೇ ಅಧಿಸೂಚನೆ ಹೊರಡಿಸಿ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು.**

**3) ಕೇಂದ್ರ ಸರ್ಕಾರ ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು.**

**4) ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ**

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಂ. ಎಸ್ ಶಲ್ಯ ತಂತ್ರ (MS Shalya Tantra)

ಬಿ.ಟೆಕ್ ಕೃಷಿ ಇಂಜಿನಿಯರಿಂಗ್ (B.Tech Agricultural Engineering) ಒಂದು 4 ವರ್ಷಗಳ ಪದವಿ ಕೋರ್ಸ್. ಇದು ಕೃಷಿಯಲ್ಲಿ ಯಂತ್ರೋಪಕರಣಗಳು, ನೀರಾವರಿ, ಮಣ್ಣು ಸಂರಕ್ಷಣೆ ಮತ್ತು ಆಹಾರ ಸಂಸ್ಕರಣೆಗೆ ತಂತ್ರಜ್ಞಾನವನ್ನು ಅನ್ವಯಿಸುವುದರ ಮೇಲೆ ಗಮನಹರಿಸುತ್ತದೆ. ದ್ವಿತೀಯ ಪಿಯುಸಿ (PCM) ನಲ್ಲಿ ಕನಿಷ್ಠ 50–60% ಅಂಕಗಳೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಹರು. ಈ ಕೋರ್ಸ್ ಕೃಷಿ ಉದ್ಯಮದಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. Shiksha.com Shiksha.com +1 ಕೃಷಿ ಇಂಜಿನಿಯರಿಂಗ್ ಕೋರ್ಸ್ ಮುಖ್ಯಾಂಶಗಳು: ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಅರ್ಹತೆ: ವಿಜ್ಞಾನ ವಿಭಾಗದಲ್ಲಿ (ಕಅಂ – ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ) 12ನೇ ತರಗತಿ (PUC) ಉತ್ತೀರ್ಣ. ಪ್ರವೇಶ ಪರೀಕ್ಷೆಗಳು: KCET, ಎಇಇ ಒಚಿಟಿ, ICAR ಂಖಇಇಂ, ಅಥವಾ ವಿಶ್ವವಿದ್ಯಾಲಯ ಮಟ್ಟದ ಪರೀಕ್ಷೆಗಳು. ಪ್ರಮುಖ ವಿಷಯಗಳು: ಕೃಷಿ ಯಂತ್ರೋಪಕರಣಗಳು, ಮಣ್ಣು ಮತ್ತು ನೀರಿನ ಸಂರಕ್ಷಣೆ, ಫಾರ್ಮ್ ಪವರ್, ಕೃಷಿ ರಚನೆಗಳು, ನವೀಕರಿಸಬಹುದಾದ ಶಕ್ತಿ, ಮತ್ತು ಆಹಾರ ಸಂಸ್ಕರಣಾ ತಂತ್ರಜ್ಞಾನ. ಶುಲ್ಕ: ಸರಾಸರಿ 7,200 ರಿಂದ ?10 ಲಕ್ಷದವರೆಗೆ ಕಾಲೇಜಿನ ಆಧಾರದ ಮೇಲೆ ಬದಲಾಗಬಹುದು. Shiksha.com Shiksha.com+2 ಉದ್ಯೋಗಾವಕಾಶಗಳು ಮತ್ತು ವೃತ್ತಿಜೀವನ: ಪದವೀಧರರು ಕೆಳಗಿನ ಹುದ್ದೆಗಳನ್ನು ಪಡೆಯಬಹುದು: ಕೃಷಿ ಇಂಜಿನಿಯರ್ (Agricultural Engineer) ಫಾರ್ಮ್ ಮೆಷಿನರಿ ಮ್ಯಾನೇಜರ್ (Farm Machinery Manager) ಸಂಶೋಧನಾ ವಿಜ್ಞಾನಿ (R&D Scientist) ಆಹಾರ ಉತ್ಪಾದನಾ ತಂತ್ರಜ್ಞ (Food Production Engineer) ಕೃಷಿ ಆರ್ಥಿಕ ತಜ್ಞ (Agricultural Economist) Shiksha.com Shiksha.com ಮುಖ್ಯ ಕಾಲೇಜುಗಳು: IIT ಖರಗ್‌ಪುರ ಮತ್ತು IIT ರೋಪರ್. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ (UAS), ಬೆಂಗಳೂರು/ರಾಯಚೂರು/ಧಾರವಾಡ. ತಮಿಳುನಾಡು ಕೃಷಿ ವಿಶ್ವವಿದ್ಯಾಲಯ (TNAU).

## ಜಿಲ್ಲೆಯಲ್ಲಿ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ: ತ್ರೀವ ಕಣ್ಣಾವಲು ರಮೇಶ ಗೌಡೂರು ಜಾಲಹಳ್ಳಿ

**ರಾಯಚೂರು: 2025–26 ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ ಇಂದಿನಿಂದ (ಫೆ.28) ಆರಂಭವಾಗಿದ್ದು, ಮಾರ್ಚ್ 17ವರೆಗೆ ನಡೆಯಲಿದೆ. ಜಿಲ್ಲೆಯಲ್ಲಿ 43 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಶಿಕ್ಷಣ ಇಲಾಖೆ ಮತ್ತು ಎಕ್ಸಾಂ ಬೋರ್ಡ್ ಪರೀಕ್ಷೆಗೆ ಸಕಲ ಸಿದ್ಧತೆ ಮಾಡಿಕೊಂಡಿದೆ. 22,442 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, 18,419 ಹೊಸ ವಿದ್ಯಾರ್ಥಿಗಳು, 3,450 ಪುನರಾವರ್ತಿತ ವಿದ್ಯಾರ್ಥಿಗಳು, 560 ಖಾಸಗಿ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ (ದ್ವಿತೀಯ) ಪರೀಕ್ಷೆ ಬರೆಯಲಿದ್ದಾರೆ.**

ಪರೀಕ್ಷಾ ಅಕ್ರಮ ತಡೆಗೆ ಎರಡನೇ ಬಾರಿಗೆ ವೆಬ್ ಕಾಸ್ಟಿಂಗ್ ಕಣ್ಣಾವಲು ಇರಲಿದ್ದು, ಪರೀಕ್ಷಾ ಕೊಠಡಿಯೊಳಗೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮೊಬೈಲ್, ಎಲೆಕ್ಟ್ರಾನಿಕ್ ವಾಚ್, ಕ್ಯಾಲುಕೇಟ–ರ್ ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಾಲಾಗಿದೆ. ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ಕೆಎಸ್‌ಆರ್‌ಟಿಸಿ ಸಾಮಾನ್ಯ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶವನ್ನು ಸರ್ಕಾರ ದಿಂದ ಮಾಡಿಕೊಟ್ಟಿದೆ. ಪರೀಕ್ಷಾ ನಿಯಮಗಳು. ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರದ 200 ಮೀಟರ್ ನಿಷೇಧಾಜ್ಞೆ, ಪಿಯುಸಿ ಎಕ್ಸಾಂ ಎಲ್ಲಾ ಕೇಂದ್ರಗಳಲ್ಲೂ ಸಿಸಿ ಕ್ಯಾಮರಾ, ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆ ಇರಲಿದೆ.

ಪರೀಕ್ಷಾ ಕೇಂದ್ರದ ಸುತ್ತ ಜೆರಾಕ್ಸ್, ಸೈಬರ್ ಸೆಂಟರ್, ಕಂಪ್ಯೂಟರ್ ಸೆಂಟರ್ ಮುಚ್ಚಬೇಕು. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಪೊಲೀಸ್ ಭದ್ರತೆ ವ್ಯವಸ್ಥೆ. ಪ್ರಶ್ನೆ ಪತ್ರಿಕೆ ಲೀಕ್ ಮಾಡುವ, ಅಕ್ರಮ ಮಾಡುವವರ ವಿರುದ್ಧ ಕ್ರಮ. ಪ್ರಶ್ನೆ ಪತ್ರಿಕೆ ರವಾನೆ ಮಾಡೋದ್ರಿಂದ ಹಿಡಿದು ಪರೀಕ್ಷಾ ಕೇಂದ್ರಕ್ಕೆ ತೆರಳೋವರೆಗೂ ಕ್ಯಾಮರಾ ರೆಕಾರ್ಡ್. ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳಿಗೆ ಸ್ಮಾರ್ಟ್ ವಾಚ್, ಎಲೆಕ್ಟ್ರಾನಿಕ್



ಉಪಕರಣಗಳು ನಿಷೇಧ ಮಾಡಲಾಗಿದೆ. ಪರೀಕ್ಷೆ ಕೇಂದ್ರಗಳು: ರಾಯಚೂರಿನಲ್ಲಿ ಆರ್.ಪಿ.ಎಸ್. ಪ.ಪೂ.ಕಾಲೇಜ್, ಬಾಲಕರ ಸ.ಪ.ಪೂ. ಕಾಲೇಜ್, ಬಾಲಕಿಯರ ಸ.ಪ.ಪೂ. ಕಾಲೇಜ್, ಟ್ಯಾಗೋರ್ ಸ್ಮಾರಕ ಪ.ಪೂ.ಕಾಲೇಜ್, ಹಮ್ದರ್ದ ಪ.ಪೂ.ಕಾಲೇಜ್, ವಿಧ್ಯಾಭಾರತಿ ಪ.ಪೂ. ಕಾಲೇಜ್, ಬಾಲಕಿಯರ ಸ.ಪ.ಪೂ. ಕಾಲೇಜ್, ಇನ್ಫಂಟ್ ಜೀಸಸ್ ಪ.ಪೂ.ಕಾಲೇಜ್, ಪ್ರಮಾಣ ಪ.ಪೂ.ಕಾಲೇಜ್, ವಿದ್ಯಾನಿಧಿ ಪ.ಪೂ. ಕಾಲೇಜ್, ಜವಾಹರನಗರ ಪ.ಪೂ.ಕಾಲೇಜ್, ಅಲ್–ಕರೀಮ್ ಪ.ಪೂ.ಕಾಲೇಜ್, ಎಸ್.ಎಸ್. ಆರ್.ಜಿ ಪ.ಪೂ.ಕಾಲೇಜಿನಲ್ಲಿ ನಡೆಯಲಿವೆ. ಲಿಂಗಸುಗೂರು ತಾಲೂಕಿನಲ್ಲಿ ನಲ್ಲಿ ಸರ್ಕಾರಿ ಪ.ಪೂ.ಕಾಲೇಜ್ ಲಿಂಗಸುಗೂರು, ಸರ್ಕಾರಿ ಪ.ಪೂ.ಕಾಲೇಜ್ ಮುದಗಲ್ಲ, ಸರ್ಕಾರಿ ಪ.ಪೂ.ಕಾಲೇಜ್ ಹಟ್ಟಿ, ಶ್ರೀಬಸವೇಶ್ವರ ಪ.ಪೂ.ಕಾಲೇಜ್ ಲಿಂಗಸೂಗುರು, ವಿ.ಸಿ.ಇ. ಎಸ್ ಪ.ಪೂ.ಕಾಲೇಜ್ ಲಿಂಗಸೂಗುರು, ಶ್ರೀಮತಿ ಎಚ್.ಎಸ್.ಗೌಡ ಪ.ಪೂ. ಕಾಲೇಜ್ ಲಿಂಗಸೂಗುರು, ಶರಣಪ್ಪಮೇಟಿ ಪ.ಪೂ.ಕಾಲೇಜ್ ಲಿಂಗಸುಗೂರಿನಲ್ಲಿ ನಡೆಯಲಿವೆ. ದೇವದುರ್ಗದಲ್ಲಿ ಬಾಲಕರ ಸ.ಪ.ಪೂ.ಕಾಲೇಜ್, ಬಾಲಕಿಯರ ಸ.ಪ.ಪೂ. ಕಾಲೇಜ್, ಬಸವ ಪ.ಪೂ, ಎಸ್.ಕೆ.ಎಂ

**ಆತ್ಮವಿಶ್ವಾಸವೇ ಯಶಸ್ಸಿನ ಗುಟ್ಟು, ವಿದ್ಯಾರ್ಥಿಗಳು ಇಡೀ ವರ್ಷ ಓದಿರುತ್ತಾರೆ. ಆ ಪರಿಶ್ರಮವನ್ನು ನೆನಪಿಸಿಕೊಂಡು ನನಗೆ ಬರುತ್ತದೆ, ನಾನು ಬರೆಯಬಹುದು ಎಂಬ ಧೈರ್ಯವನ್ನು ವಿದ್ಯಾರ್ಥಿಗಳು ಮನಸ್ಸಿನಲ್ಲಿ ಇಟ್ಟುಕೊಂಡು, ಸಕಾರಾತ್ಮಕ ಚಿಂತನೆಯ ಮೂಲಕ ತಮ್ಮ ಸಾಮಥ್ರ?ಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಈಶ್ವರ ಕುಮಾರ್ ಕಾಂದೂ, ಮುಖ್ಯಕಾರ್ಯನಿರ್ವಾಹಕ ಅಧಿಕಾ–ರಿಗಳು, ಜಿಲ್ಲಾ ಪಂಚಾಯತ್ ರಾಯಚೂರು.**

ಪ.ಪೂ ಹಾಗೂ ಜ್ಞಾನಜ್ಯೋತಿ ಪ.ಪೂ. ಕಾಲೇಜಿನಲ್ಲಿ ನಡೆಯಲಿವೆ. ಸಿಂಧನೂ–ರಿನಲ್ಲಿ ಬಾಲಕರ ಸ.ಪ.ಪೂ.ಕಾಲೇಜ್, ಶ್ರೀಬಸವೇಶ್ವರ, ಆರ್.ಜಿ.ಎಮ್, ಶ್ರೀಕನಕದಾಸ, ಸಂಕೇತ, ಎವಿಎಸ್ ಬ್ರಿಲಿಯಂಟ್, ಕ್ರಿಷ್ಣದೇವರಾಯ, ಎಕ್ಸಲೆಂಟ್ ಹಾಗೂ ವಿಸ್ಡಮ್ ಪ.ಪೂ.ಕಾಲೇಜ್ ನಲ್ಲಿ ನಡೆಯಲಿವೆ. ಮಾನವಿಯಲ್ಲಿ ಸರ್ಕಾರಿ ಬಾಲಕರ ಹಾಗೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜ್, ಎಸ್.ಪಿ.ವಿ, ಎಸ್.ಆರ್.ಎಸ್.ವಿ, ಲೋಯೋಲಾ ಪದವಿ ಪೂರ್ವ ಕಾಲೇಜಿನ ನಡೆಯಲಿವೆ.

ಮಸ್ಕಿನಲ್ಲಿ ಬಾಲಕರ ಹಾಗೂ ಬಾಲಕಿರ ಸ.ಪ.ಪೂ ಕಾಲೇಜ್‌ನಲ್ಲಿ ನಡೆಯಲಿವೆ. ಸಿರವಾರದಲ್ಲಿ ಸರ್ಕಾರಿ ಪ.ಪೂ.ಕಾಲೇಜ್ ಹಾಗೂ ಅಮರೇಗೌಡ ಪಾಟೀಲ್ ಬಯ್ಯಾಪೂರ್ ಪ.ಪೂ ಕಾಲೇಜಿನಲ್ಲಿ ನಡೆಯಲಿವೆ. ವೇಳಾಪಟ್ಟಿ: ಫೆಬ್ರವರಿ 28ರ ಶನಿವಾರ ದಂದು ಕನ್ನಡ, ಅರೇಬಿಕ್, ಮಾರ್ಚ್ 2ರ ಸೋಮವಾರ ದಂದು ಭೂಗೋಳ ಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ, ಮಾರ್ಚ್ 3ರ ಮಂಗಳವಾರ ದಂದು ಇಂಗ್ಲಿಷ್, ಮಾರ್ಚ್ 4ರ ಬುಧವಾರ ದಂದು ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ ಫ್ರೆಂಚ್, ಮಾರ್ಚ್ 5ರ ಗುರುವಾರ ದಂದು ಇತಿಹಾಸ, ಮಾರ್ಚ್ 6ರ ಶುಕ್ರವಾರ ದಂದು ಭೌತಶಾಸ್ತ್ರ, ಮಾರ್ಚ್ 7ರ ಶನಿವಾರ ದಂದು ಐಚ್ಛಿಕ ಕನ್ನಡ, ವ್ಯವಹಾರ ಅಧ್ಯಯನ, ಭೂಗರ್ಭ ಶಾಸ್ತ್ರ, ಮಾರ್ಚ್ 9ರ ಸೋಮವಾರ ದಂದು ರಸಾಯನಶಾಸ್ತ್ರ, ಶಿಕ್ಷಣಶಾಸ್ತ್ರ, ಮೂಲ ಗಣಿತ, ಮಾರ್ಚ್ 10ರ ಮಂಗಳವಾರ ದಂದು ಅರ್ಥಶಾಸ್ತ್ರ, ಮಾರ್ಚ್ 11ರ ಬುಧವಾರ ದಂದು ತರ್ಕಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗೃಹ ವಿಜ್ಞಾನ, ಮಾರ್ಚ್ 12ರ ಗುರುವಾರ ದಂದು ಹಿಂದಿ, ಮಾರ್ಚ್ 13ರ ಶುಕ್ರವಾರ ರಾಜ್ಯಶಾಸ್ತ್ರ, ಮಾರ್ಚ್ 14ರ ಶನಿವಾರ ದಂದು ಲೆಕ್ಕಶಾಸ್ತ್ರ, ಗಣಿತ, ಮಾರ್ಚ್ 16ರ ಸೋಮವಾರ ದಂದು ಸಮಾಜಶಾಸ್ತ್ರ, ಜೀವಶಾಸ್ತ್ರ, ಗಣಕ ವಿಜ್ಞಾನ, ಮಾರ್ಚ್ 17ರ ಮಂಗಳವಾರ ದಂದು ಹಿಂದುಸ್ತಾನಿ ಸಂಗೀತ, ಎಲೆಕ್ಟ್ರಾನಿಕ್ಸ್ ಮತ್ತು ಯಂತ್ರಾಂಶ ಉಡುಪುಗಳ ತಯಾ–ರಿಕೆ ಮತ್ತು ಗೃಹೋಪಯೋಗಿ ವಸ್ತುಗಳು, ಮಾಹಿತಿ ತಂತ್ರಜ್ಞಾನ, ರೀಟೇಲ್ ಆಟೋಮೊಬೈಲ್, ಆರೋಗ್ಯ ರಕ್ಷಣೆ, ಬ್ಯೂಟಿ ಅಂಡ್ ವೆಲ್‌ನೆಸ್ ವಿಷಯಗಳು ನಡೆಯಲಿವೆ. ಉಚಿತ ಪ್ರಯಾಣ ವ್ಯವಸ್ಥೆ: ವಿದ್ಯಾರ್ಥಿಗಳು ತಮ್ಮ ನಿವಾಸದಿಂದ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಮತ್ತು ಮರಳಿ ಮನೆಗೆ ಬರಲು ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಕಾಲೇಜಿನ ಗುರುತಿನ ಚೀಟಿ ಮತ್ತು ಪ್ರವೇಶಪತ್ರವನ್ನು ತೋರಿಸಿ ಪ್ರಯಾಣಿಸಬಹುದಾಗಿದೆ. ಗಾಬರಿ ಹಾಗೂ ಆತಂಕಕ್ಕೆ ಒಳಗಾಗದೆ, ವಿದ್ಯಾರ್ಥಿಗಳು ನಿಶ್ಚಿಂತೆಯಿಂದ ಪರೀಕ್ಷೆ ಎದುರಿಸಿ, ಮೊದಲ 15 ನಿಮಿಷಗಳ ಕಾಲ ಪ್ರಶ್ನೆ ಪತ್ರಿಕೆಯನ್ನು ಸಂಪೂರ್ಣವಾಗಿ ಓದಿಕೊಳ್ಳಿ, ಯಾವುದೇ ವದಂತಿಗೆ ಕಿವಿಕೊಡದೆ ಪರೀಕ್ಷೆಯನ್ನು ಎದು–ರಿಸಬೇಕೆಂದು. ಸೋಮಶೇಖರಪ್ಪ ಹೊಕ್ರಾಣಿ, ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಯಚೂರು

## 3ನೇ ದಿನಕ್ಕೆ ಕಾಲಿಟ್ಟ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಮೈಲೇಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ರದ್ದುಗೊಳಿಸಿ ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿ ತಾಳಿಕೋಟಿ ತಾಲೂಕ ಹೋರಾಟ ಸಮಿತಿ ವತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಯುತ್ತಿರುವ ಅನಿರ್ದಿಷ್ಟ ಅವಧಿ ಧರಣಿ ಸತ್ಯಾಗ್ರಹವು ಶುಕ್ರವಾರ 3ನೇ ದಿನಕ್ಕೆ ಕಾಲಿಟ್ಟಿದೆ. ಮೂರನೇ ದಿನ ಶ್ರೀ ಶಿವಶರಣ ಮಾದರ ಚೆನ್ನಯ್ಯ ಸಮಾಜದ ವತಿಯಿಂದ ಈ ಹೋರಾಟಕ್ಕೆ ಬೆಂಬಲಿಸಿ ಸತ್ಯಾಗ್ರಹ ನಡೆಸಿದರು.**



ಇದೇ ಸಂದರ್ಭದಲ್ಲಿ ತಾಲೂಕು ದಂಡಾಧಿಕಾ–ರಿಗಳಾದ ಡಾ. ಶ್ರೀಮತಿ ವಿನಯಾ ಹೂಗಾರ್ ಇವರು ಧರಣಿ ಸತ್ಯಾಗ್ರಹ ಸ್ಥಳಕ್ಕೆ ಆಗಮಿಸಿ , ಧರಣಿ ಕೈ ಬಿಡುವಂತೆ ಮನವಿ ಮಾಡಿದರು ಆದರೆ ಮನವಿಗೆ ತಾಲೂಕು ಹೋರಾಟ ಸಮಿತಿಯವರು ಸ್ಪಂದಿಸಲಿಲ್ಲ. ಸರ್ಕಾರ ಈ ಮುಂಚೆ ನಿಗದಿಪಡಿಸಿದ ಸ್ಥಳವನ್ನು ರದ್ದುಗೊಳಿಸಿದರೆ ಮಾತ್ರ ನಾವು ಧರಣಿ ಅಂತ್ಯಗೊಳಿಸುತ್ತೇವೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಅನೇಕರು ಮಾತನಾಡಿದರು. ಶ್ರೀ ಶಿವಶರಣ ಮಾದರ ಚೆನ್ನಯ್ಯ ಸಮಾಜದ ಅಧ್ಯಕ್ಷರಾದ ಯಮನಪ್ಪ ಕಟ್ಟಿಮನಿ ಉಪಾಧ್ಯಕ್ಷರಾದ ರಾಮಣ್ಣ ಕಟ್ಟಿಮನಿ ಹಾಗೂ ಸಮಾಜದ ಗಣ್ಯ ವ್ಯಕ್ತಿಗಳಾದ ಹುಲಿಗೆಪ್ಪ ಕಟ್ಟಿಮನಿ ನಾಗಪ್ಪ ಕಟ್ಟಿಮನಿ ಕಾಶಿನಾಥ್ ಕಟ್ಟಿಮನಿ ಬಸವರಾಜ್ ಕಟ್ಟಿಮನಿ , ಕಾಶಿನಾಥ್ ಕಟ್ಟಿಮನಿ, ಬಸವರಾಜ ಕಟ್ಟಿಮನಿ, ರಮೇಶ್ ಜಾಧವ, ಶಾಂತಪ್ಪ ಇಂಗಳಗೇರಿ, ರಮೇಶ್ ಹಡಗಿನಾಳ, ಪರಶುರಾಮ ಕಟ್ಟಿಮನಿ, ರಾಜು ಕಟ್ಟಿಮನಿ, ಶರಣು ಜಾಲಹಳ್ಳಿ ಕಾಶಿನಾಥ್ ಕತ್ನೂರ, ಗಿರೀಶ ಕಟ್ಟಿಮನಿ, ಗೋಪಾಲ್ ಕಟ್ಟಿಮನಿ, ಪರಸಪ್ಪ ಕಟ್ಟಿಮನಿ, ತಿಮ್ಮಪ್ಪ ಜಾಲಹಳ್ಳಿ, ಮುತ್ತಪ್ಪ ಆಲೂರು, ನಿಂಗಪ್ಪ ಶಿರೂರ, ಶರಣಪ್ಪ ಹರನಾಳ, ಬಸಪ್ಪ ತಿಪ್ಪಣ್ಣ ಕಟ್ಟಿಮನಿ, ದಶರತಸಿಂಗ್ ಮನಗೂಳಿ, ಆರ್. ಎಸ್.ಪಾಟೀಲ(ಕೂಚಬಾಳ),ಕಾಶಿನಾಥ ಮುರಾಳ,ಮುತ್ತಪ್ಪ ಚಮಲಾಪೂರ,ಪ್ರಕಾಶ ಹಜೇರಿ, ಪರಶುರಾಮ ತಂಗಡಗಿ,ಸಿರಸಕುಮಾರ ಹಜೇರಿ,ರವಿ ಕಟ್ಟಿಮನಿ, ನಾಗೇಶ ಕಟ್ಟಿಮನಿ,ವಿಜಯಸಿಂಗ್ ಹಜೇರಿ, ಮಾಸೂಮಸಾಬ ಕೆಂಭಾವಿ ಮುಂತಾದವರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ತಿಪ್ಪೆಗೆ ಬಿಸಾಕಿದ ಔಷಧಿಗಳು ಆರೋಗ್ಯ ಇಲಾಖೆಗೆ ಸಂಬಂಧಿಸಿಲ್ಲ: ಡಿಎಚ್‌ಒ ಡಾ.ಸುರೇಂದ್ರ ಬಾಬು

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇತ್ತೀಚಿಗೆ ನಗರದ ಚಂದ್ರಬಂಡ ರಸ್ತೆಯ ಜಲಾಲ್‌ನಗರ ಬಡಾವಣೆ ಬಳಿಯ ತಿಪ್ಪೆಯಲ್ಲಿ ಪತ್ತೆಯಾದ ಔಷಧಿಗಳು ಕುರಿತು ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳಲ್ಲಿ ರಾಯಚೂರಲ್ಲಿ ಅವಧಿ ಇರುವ ಲಕ್ಷಾಂತರ ರೂಪಾಯಿ ಮೌಲ್ಯದ ಔಷಧಿಗಳು ತಿಪ್ಪೆಗೆ ಬಿಸಾಕಿದ ಸರ್ಕಾರಿ ಆಸ್ಪತ್ರೆ ಸಿಬ್ಬಂದಿ ಎನ್ನುವ ವಿಷಯವು ಪ್ರಕಟವಾಗಿದ್ದು,**

ಈ ಸುದ್ದಿಯು ಆರೋಗ್ಯ ಇಲಾಖೆಗೆ ಸಂಬಂಧಿಸಿರುವುದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಸ್ಪಷ್ಟಿಕರಣ ನೀಡಿದ್ದಾರೆ. ಫೆ.22ರಂದು ರಾಯಚೂರಲ್ಲಿ ಅವಧಿ ಇರುವ ಲಕ್ಷಾಂತರ ರೂಪಾಯಿ ಮೌಲ್ಯದ ಔಷಧಿಗಳು ತಿಪ್ಪೆಗೆ ಬಿಸಾಕಿದ ಸರ್ಕಾರಿ ಆಸ್ಪತ್ರೆ ಸಿಬ್ಬಂದಿ ಎನ್ನುವ ವಿಷಯವು ಪ್ರಕಟವಾಗಿರುತ್ತದೆ. ಈ ವಿಷಯದ ಗಂಭೀರತೆ ಅನ್ವಯ ತಕ್ಷಣ ಈ ಕುರಿತು ತನಿಖಾ ತಂಡವನ್ನು ರಚನೆ ಮಾಡಲಾಯಿತು. ತಂಡವು ಔಷಧಿ ಪತ್ತೆಯಾದ ಸ್ಥಳದಲ್ಲಿ ಹಾಗೂ ಎಲ್ಲ ಔಷಧಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅಂತಿಮ ವರದಿಯನ್ನು ಸಲ್ಲಿಸಿರುತ್ತದೆ.



ಅಂತಿಮ ವರದಿಯ ಪ್ರಕಾರ ಚಂದ್ರಬಂಡ ರಸ್ತೆಯ ಜಲಾಲ್‌ನಗರ ಬಡಾವಣೆ ಬಳಿ ಬಿಸಾಕಿರುವ ಸಿರಿಂಜ್‌ಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧ ಪಟ್ಟಿರುವುದಿಲ್ಲ. ಅಲ್ಲದೆ ಕೆಲವೊಂದು ಸಿರಪ್, ಟಾನಿಕ್ಸ್ ಬಾಟಲ್ಸ್‌ಗಳು ಸಿಕ್ಕಿದ್ದು, ಈ ವಸ್ತುಗಳು ಫೀಜಿಷಿಯನ್ ಸ್ಯಾಂಪಲ್ ಇರುವುದು ಕಂಡುಬಂದಿದ್ದು, ಈ ಔಷಧಿಗಳೆಲ್ಲವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಿಲ್ಲವೆಂದು ಪ್ರಾಥಮಿಕ ವರದಿಯಲ್ಲಿ ತಿಳಿಸಲಾಗಿದೆ.


ಈ ಕುರಿತು ಸಹಾಯಕ ಔಷಧ ನಿಯಂತ್ರಕ ಅಧಿಕಾರಿಗಳು ಕಚೇರಿ ಹಾಗೂ ಪರಿಸರ ಮಾಲಿನ್ಯ ಇಲಾಖೆ ವತಿಯಿಂದ ಮುಂದಿನ ಕ್ರಮ ತೆಗೆದುಕೊಳ್ಳುವವರು ಎಂದು ವರದಿಯಲ್ಲಿ ತಿಳಿಸಲಾಗಿದ್ದು, ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಸುದ್ದಿಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿರುವುದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರ ಬಾಬು ಅವರು ಪ್ರಕಟಣೆಯಲ್ಲಿ ಸ್ಪಷ್ಟೀಕರಣವನ್ನು ನೀಡಿದ್ದಾರೆ.

## ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತಕ್ಕಾಗಿ ಎನ್‌ಎಸ್‌ಪಿ ನೋಂದಣಿಗೆ ಸೂಚನೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ಮಾನ್ವಿ ತಾಲೂಕಿನ ವಿವಿಧ ಪ್ರೌಢಶಾಲೆಗಳಲ್ಲಿ 9 ಮತ್ತು 10 ನೇ ತರಗತಿಯಲ್ಲಿ ಪಂಗಡದ ವಿದ್ಯಾರ್ಥಿಗಳಿಗೆ ಕೇಂದ್ರ ಸರಕಾರದ ಆದೇಶದಂತೆ 2025–2026ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು ಮಂಜೂರಿಗೆ ನೋಂದಣಿ ಮಾಡಿಕೊಳ್ಳಬೇಕೆಂದು ಕೋರಲಾಗಿದೆ.**

ಎನ್‌ಎಸ್‌ಪಿ ಓಟಿಆರ್ ನೋಂದಣಿ ಅವಶ್ಯಕವಾಗಿದ್ದು, ಈಗಾಗಲೇ ಎನ್‌ಎಸ್‌ಪಿ ಓಟಿಆರ್ ನೋಂದಣಿ ಮಾಡಲು ಬಾಕಿ ಇದ್ದ ಒಟ್ಟು 1006 ವಿದ್ಯಾರ್ಥಿಗಳಲ್ಲಿ ಈಗಾಗಲೇ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಹಕಾರದಿಂದ ಈ ಇಲಾಖೆಯ ನಿಲಯ ಪಾಲಕರು ಅಖಂಡ ಮಾನವಿ ತಾಲೂಕಿನ




ಪ್ರತಿ ಶಾಲೆಗೆ ಭೇಟಿ ನೀಡಿ 9 ಮತ್ತು 10 ನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಎನ್‌ಎಸ್‌ಪಿ ಓಟಿಆರ್ ನೋಂದಣಿ ಮಾಡಲಾಗಿರುತ್ತದೆ.

ಇನ್ನೂ ಸುಮಾರು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಎನ್‌ಎಸ್‌ಪಿ ಓಟಿಆ–ರ್ ನೋಂದಣಿ ಕಾರ್ಯ ಬಾಕಿ ಇರುತ್ತದೆ.

ಈ ವಿದ್ಯಾರ್ಥಿಗಳಿಗೆ ಭಾರತ ಸರಕಾರದ ಶಿಷ್ಯವೇತನ ಮಂಜೂರಾತಿ ಮಾಡಲು ಸಾಧ್ಯಾವಾಗಿರುವುದಿಲ್ಲ. ಕಾರಣ ಎನ್‌ಎಸ್‌ಪಿ ಓಟಿಆರ್ ನೋಂದಣಿ ಮಾಡಲು ಬಾಕಿ ಇರುವ 9 ಮತ್ತು 10 ನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳು ಕೂಡಲೇ ತಮ್ಮ ಶಾಲೆಯ ಮುಖ್ಯೋಪಾಧ್ಯಾಯರನ್ನು ಭೇಟಿ ಎನ್–ಎಸ್‌ಪಿ ಓಟಿಆರ್ ಅನ್ನು https://scholarships.gov.in/ ಮಾಡಿಸಕಬೇಕೆಂದು ಮಾನ್ವಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾ–ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಹಾನ್ ಕ್ರಾಂತಿಕಾರಿ ಚಂದ್ರಶೇಖರ್ ಆಜಾದ್ ಅವರ 95ನೇ ಹುತಾತ್ಮ ದಿನ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಚಂದ್ರಶೇಖರ್ ಆಜಾದ್ ಜೀವನ ಮತ್ತು ವಿಚಾರಗಳ ಕುರಿತು ಎಐ–ಡಿವೈಓ ಜಿಲ್ಲಾ ಅಧ್ಯಕ್ಷರಾದ ಚನ್ನಬಸವ ಜಾನೇಕಲ್ ಮಾತನಾಡಿ, ಪಂಡಿತ್ ಜಿ ಎಂದೆ ಪ್ರಖ್ಯಾತರಾದ ಚಂದ್ರಶೇಖರ್ ಆಜಾದ್ ಅತ್ಯಂತ ಅಪಾಯಕಾರಿ ಸಂದರ್ಭಗಳಲ್ಲೂ ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿ ಹೋರಾಟವನ್ನು ನಡೆಸಿದರು. ಜೊತೆಗಾರ ಸಂಗಾತಿಗಳು ಹಲವಾರು ಜನರನ್ನು ಕಳೆದುಕೊಂಡರೂ ಸಹ ಎದೆಗುಂದದೆ ಹೋರಾಟವನ್ನು ಮುಂದುವರಿಸಿದರು.**

ತಾವು ನಂಬಿದ ವಿಚಾರಕ್ಕಾಗಿ ಎಂದು ರಾಜಿ ಮಾಡಿಕೊಳ್ಳದೆ ಹೋರಾಟವನ್ನು ನಡೆಸಿದರು ಎಂದರು. ಬಾಲ್ಯದಲ್ಲಿ ಹಲವಾರು ಕಷ್ಟ ನಷ್ಟಗಳನ್ನು ಎದುರಿಸಿ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿದರು. ಅಸಹಕಾರ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ನಂತರ ಎಚ್ ಆರ್ ಎ ಕ್ರಾಂತಿಕಾರಿ ಸಂಘಟನೆಯ ಸಂಪರ್ಕಕ್ಕೆ ಬಂದರು. ರಾಮ್ ಪ್ರಸಾದ್ ಬಿಸ್ಮಿಲ್, ಅಶ್ವ ಕುಲ್ಲಾ ಖಾನ್ ಭಗತ್ ಸಿಂಗ್, ಸುಖದೇವ್ ಜೊತೆಗೂಡಿ



ಹೋರಾಟವನ್ನು ತೀವ್ರಗೊಳಿಸಿದರು. ದೇಶದ ಸ್ವಾತಂತ್ರ್ಯ ಬರುವುದಷ್ಟೇ ಅಲ್ಲ ಮಾನವನಿಂದ ಮಾನವನ ಶೋಷಣೆ ನಿರ್ಮೂಲನೆ ಗೊಳಿಸುವ ಕನಸು ಕಂಡಿದ್ದರು. ಸಮಾಜವಾದಿ ಸಮಾಜದ ಸ್ಥಾಪನೆ ಅವರ ಗುರಿಯಾಗಿತ್ತು. ಆದ–'ರೆ ಅವರು ಕನಸು ಕೈಗೂಡಲಿಲ್ಲ ಎಂದು ಅಭಿಪ್ರಾಯಪಟ್ಟರು. ಅವರ ಕನಸಿನ ಭಾರತ ಕಟ್ಟಲು ಯುವಜನತೆ ಮುಂದಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ವಿರುಪಾಕ್ಷಿ ಬಿ. ಎಂ ಅವರು ಹುತಾತ್ಮ ಚಂದ್ರಶೇಖರ್ ಅಜಾದ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿ, ಚಂದ್ರಶೇಖರ ಆಜಾದ್ ಮತ್ತಿತರ ಹಲವಾರು ಜನ ಮಹಾನ್ ವ್ಯಕ್ತಿಗಳು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದು ಮಾಡಿದರು. ಅವರ ಮಹತ್ವವನ್ನು ನಾವಿಂದು ಹೆಚ್ಚು ಹೆಚ್ಚು ಅರಿತುಕೊಳ್ಳಬೇಕಾಗಿದೆ. ಅವರ ತ್ಯಾಗ ಬಲಿದಾನದಿಂದಲೇ ಇಂದು ದೇಶಕ್ಕೆ ಸ್ವಾತಂತ್ರ್ಯ ಲಭಿಸಿದೆ. ಅದನ್ನು ಸರಿಯಾಗಿ ಕಾಪಾಡಿಕೊಂಡು ಭವಿಷ್ಯದ ಭಾರತವನ್ನು ಕಟ್ಟಲು ಯುವಜನರು ವೈಚಾರಿಕವಾಗಿ ಜಾಗೃತರಾಗಬೇಕು ಎಂದರು.

ಉಪನ್ಯಾಸಕರಾದ ಡಾ. ಸವಿತಾ ಅವರು ಮಾತನಾಡಿ ಮೊದಲು ಬ್ರಿಟಿಷರಷ್ಟೇ ನಮ್ಮ ಶತ್ರು ಆಗಿದ್ದು ಇಂದು ನಮ್ಮ ಸುತ್ತಮುತ್ತಲು ಶತ್ರುಗಳಿದ್ದಾರೆ. ಶತ್ರು ಯಾರಂದೇ ಗುರುತಿಸಲು ಸಾಧ್ಯವಾಗದಂತಾಗಿದೆ. ಮೊಬೈಲ್ ಕೂಡ ಒಂದು ಶತ್ರುವಿನ ರೀತಿಯಲ್ಲಿ ನಮ್ಮನ್ನು ನಿಯಂತ್ರಿಸುತ್ತಿದೆ. ಅದರ ಬಗ್ಗೆ ಜಾಗೃತರಾಗಿರಬೇಕು ಎಂದರು. ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿ ಋತು ಅವರು ಸ್ವಾಗತಿಸಿ ನಿರೂಪಿಸಿದರು. ಪ್ರಥ–'ಮ ವರ್ಷದ ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.